ಸಂಪಾದಕರು :
ಎಂ.ಎಸ್. ವಿಕಾಸ್

ಶುಕ್ರವಾರ, ಫೆಬ್ರವರಿ 23, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 282 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

## ತರಳಬಾಳು ಹುಣ್ಣಿಮೆ ಭಕ್ತಿ, ಶಕ್ತಿ, ವೈರಾಗ್ಯಗಳ ಸಂಗಮ



ಸಿರಿಗೆರೆ, ಫೆ. 22 – ಸಿರಿಗೆರೆ ಬೃಹನ್ಮಠದಿಂದ ನಡೆಸಲಾಗುವ ತರಳಬಾಳು ಹುಣ್ಣಿಮೆಯು ಭಕ್ತಿ, ಶಕ್ತಿ, ಯುಕ್ತಿ ಹಾಗೂ ಪರಮ ವೈರಾಗ್ಯಗಳ ಸಂಗಮವಾಗಿದೆ ಎಂದು ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅಭಿಪ್ರಾಯ ಪಟ್ಟಿದ್ದಾರೆ.

ಚಿತ್ರದುರ್ಗ ಜಿಲ್ಲೆ ಸಿರಿಗೆರೆಯ ತರಳಬಾಳು ಮಠದಲ್ಲಿ ಆಯೋಜಿಸಲಾಗಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ಮೊದಲ ದಿನದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ತರಳಬಾಳು ಹುಣ್ಣಿಮೆ ಮಹೋತ್ಸವಕ್ಕೆ ತನ್ನದೇ ಆದ ಹಿರಿಮೆ ಇದೆ. ದೇಶ-ವಿದೇಶಗಳಲ್ಲಿರುವ ಭಕ್ತರು ತಮ್ಮ ಹಳೆಯ ನೆನಪುಗಳೊಂದಿಗೆ ಬಂದು ಭಾವುಕರಾಗಿ ಮರಳುತ್ತಾರೆ ಎಂದರು.

ಇವನಾರವ ಇವನಾರವ ಎನ್ನದೆ, ಇವ ನಮ್ಮವ ಇವ ನಮ್ಮವ ಎನ್ನೋಣ, ಎಲ್ಲರನ್ನೂ ಪ್ರೀತಿಸೋಣ. ಅಕ್ಕಮಹಾದೇವಿಯವರ ಆಶಯದಂತೆ ನಮ್ಮ ಸಮಾಜದ ಮಹಿಳೆಯರು ಅಧ್ಯಾತ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಉತ್ತುಂಗದ ಶಿಖರ ಏರಲಿ. ಮಕ್ಕಳನ್ನು ಹುಟ್ಟಿನಿಂದಲೇ ಸಂಸ್ಕಾರಯುತವಾಗಿ ಬೆಳೆಸಲು ತಾಯಂದಿರು ಸದಾಚಾರಣೆಗಳನ್ನು (6ನೇ ಪುಟಕ್ಕೆ)


## ಬೋರ್ ಕೊರೆಸಲು ಅನುಮತಿ ಕಡ್ಡಾಯ

ದಾವಣಗೆರೆ, ಫೆ. 22 - ಅಂತರ್ಜಲ ಮಟ್ಟ ಕಡಿಮೆಯಾಗಿರುವುದರಿಂದ ಕೊಳವೆಬಾವಿ ಕೊರೆಯಲು ನಿರ್ಬಂಧವಿದೆ. ಕೊಳವೆ ಬಾವಿ ಕೊರೆಯಲು ರಿಗ್ ಮಾಲೀಕರು ನಮೂನೆ-7 ರಲ್ಲಿ ಅನುಮತಿ ಪಡೆಯಬೇಕಾಗಿರುತ್ತದೆ ಎಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ತಿಳಿಸಿದರು.



ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶೀಘ್ರದಲ್ಲೇ ರಿಗ್ ಮಾಲೀಕರ ಸಭೆ ಕರೆದು ಅನುಮತಿ ಪಡೆಯುವ ಕುರಿತು ತಿಳುವಳಿಕೆ ನೀಡಲಾಗುವುದು ಎಂದು ಹೇಳಿದರು.

ಮಳೆ ಕೊರತೆಯಿಂದಾಗಿ ಅಂತರ್ಜಲ ಮಟ್ಟ ಗಣನೀಯವಾಗಿ ಇಳಿಕೆಯಾಗಿದೆ. 126 ಸಮಸ್ಯಾತ್ಮಕ ಗ್ರಾಮಗಳನ್ನು ಇದುವರೆಗೂ ಗುರುತಿಸಲಾಗಿದೆ. 19 ಗ್ರಾಮಗಳಲ್ಲಿ (4ನೇ ಪುಟಕ್ಕೆ)




## ವರ್ಷಾಂತಿಕ ಸಮಾರಾಧನೆ

|| ಶ್ರೀ ಸೋಮೇಶ್ವರ ಪ್ರಸನ್ನ ||

ಶ್ರೀ ವೆಂಕಟೇಶ್ ಪಾಂಡುರಂಗ ಕುರ್ಡೇಕರ್ (ಉತ್ತಂಗಿ) ಮತ್ತು ಸಹೋದರರು ದಾವಣಗೆರೆ.

ಇವರು ಮಾಡುವ ವಿಜ್ಞಾಪನೆಗಳು.

ಆತ್ಮೀಯರೇ, ನಮ್ಮ ಸಹೋದರ (ಪಾಂಡುರಂಗ ಕುರ್ಡೇಕರ್ (ಉತ್ತಂಗಿ) ಇವರ ತೃತೀಯ ಪುತ್ರ)



**ಶ್ರೀ ಗೋವಿಂದರಾಯ್ ಪಿ. ಕುರ್ಡೇಕರ್ (ಉತ್ತಂಗಿ)**

ಇವರು ಸ್ವರ್ಗಸ್ಥರಾಗಿ 1ವರ್ಷ ಪೂರ್ಣವಾಯಿತು. ಮೃತರ ಆತ್ಮಶಾಂತಿಗಾಗಿ

**ವರ್ಷಾಂತಿಕ ಸಮಾರಾಧನೆಯನ್ನು**

ದಿನಾಂಕ 23-02-2024ನೇ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ದಾವಣಗೆರೆ ಸಿಟಿ ಮಹಾರಾಜಪೇಟೆಯಲ್ಲಿರುವ ವಿಠಲ ರುಕುಮಾಯಿ ಸಮುದಾಯ ಭವನದಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ,

ದುಃಖತಪ್ತರು : ಧರ್ಮಪತ್ನಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಕುರ್ಡೇಕರ್ ಕುಟುಂಬದವರು ಹಾಗೂ ಬಂಧುಗಳು

ಶ್ರೀ ವೆಂಕಟೇಶ್ ಪಾಂಡುರಂಗ ಕುರ್ಡೇಕರ್ ಮತ್ತು ಸಹೋದರರು (ಉತ್ತಂಗಿ)

**ಉತ್ತಂಗಿ ಜ್ಯೂಯಲರ್ಸ್**

✦ ಚೌಕಿಪೇಟೆ, ✦ ಬೆಳ್ಳೂಡಿ ಗಲ್ಲಿ, ದಾವಣಗೆರೆ.
ಮೊ : 9242866452, 9916931295, 9591443343

## ಲೋಕಸಭಾ ಚುನಾವಣೆಗೆ ಸನ್ನದ್ಧರಾದ ಅಧಿಕಾರಿಗಳು

### ಚುನಾವಣಾ ಕರ್ತವ್ಯಗಳ ಬಗ್ಗೆ ತರಬೇತಿ

ದಾವಣಗೆರೆ, ಫೆ.22- ಮುಂಬರುವ 2024ರ ಲೋಕಸಭಾ ಸಾರ್ವತ್ರಿಕ ಚುನಾವಣೆಗೆ ಸನ್ನದ್ಧರನ್ನಾಗಿಸಲು ಚುನಾವಣಾ ತಂಡಗಳಿಗೆ ಜಿಲ್ಲಾಡಳಿತದ ತುಂಗಭದ್ರಾ ಸಭಾಂಗಣದಲ್ಲಿ ಇಂದು ತರಬೇತಿ ನೀಡಲಾಯಿತು.

ಸಹಾಯಕ ಚುನಾವಣಾಧಿಕಾರಿಗಳು, ಚೆಕ್‌ಪೋಸ್ಟ್‌ಗಳಲ್ಲಿ ಕಾರ್ಯನಿರ್ವಹಿಸುವ ಸ್ಟ್ಯಾಟಿಕ್ ಸರ್ವಲೆನ್ಸ್ ಟೀಮ್ ಎಸ್‌ಎಸ್‌ಟಿ, ಫ್ಲೈಯಿಂಗ್ ಸ್ಕ್ವಾಡ್, ವಿಡಿಯೋ ಸರ್ವಲೆನ್ಸ್ ಟೀಮ್, ವಿಡಿಯೋ ವೀವಿಂಗ್ ಟೀಮ್, ಅಬಕಾರಿ ತಂಡ, ವಾಣಿಜ್ಯ ತೆರಿಗೆ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ವಿವಿಧ ತಂಡಗಳ ನೋಡಲ್ ಅಧಿಕಾರಿಗಳಿಗೆ ಚುನಾವಣಾ ಕರ್ತವ್ಯಗಳ ಬಗ್ಗೆ ತರಬೇತಿ ನೀಡಲಾಯಿತು.

ಚುನಾವಣಾ ಸಂದರ್ಭದಲ್ಲಿ ಚೆಕ್‌ಪೋಸ್ಟ್‌ಗಳಲ್ಲಿ ಅನುಸರಿಸಬೇಕಾದ ಕ್ರಮಗಳು, ಚುನಾವಣಾ ರ‍್ಯಾಲಿಗಳ ಸಂದರ್ಭದಲ್ಲಿ ಖರ್ಚು ವೆಚ್ಚಗಳ ನಿಗಾ, ಅನುಮತಿ, ಪಡೆಯುವ ಬಗ್ಗೆ, ಚುನಾವಣಾ ಪ್ರಚಾರಕ್ಕೆ (2ನೇ ಪುಟಕ್ಕೆ)




## ಸೋಮಶೇಖರಪ್ಪ ಆಲೂರು (ಶೇಖಣ್ಣ) ನಿಧನ



ದಾವಣಗೆರೆ ಹಳೆಪೇಟೆ, ಹಗೆದಿಬ್ಬ ಸರ್ಕಲ್, ಕಾಳಿಕಾದೇವಿ ರಸ್ತೆ ನಿವಾಸಿ ದಿವಂಗತ ಆಲೂರು ಸುಶೀಲಮ್ಮ, ದಿವಂಗತ ಶಂಕ್ರಪ್ಪ ಆಲೂರು ಇವರ ತೃತೀಯ ಪುತ್ರ

**ಶ್ರೀ ಸೋಮಶೇಖರಪ್ಪ ಆಲೂರು (ಶೇಖಣ್ಣ)**

ಇವರು, ದಿನಾಂಕ 22-02-2024ರ ಗುರುವಾರ ಬೆಳಿಗ್ಗೆ 11-30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 68 ವರ್ಷ ವಯಸ್ಸಾಗಿತ್ತು. ಅಣ್ಣ ಪ್ರಕಾಶ್ ಆಲೂರು, ತಂಗಿ ತಾಯಮ್ಮ ಆಲೂರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 23-02-2024ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಬೂದಾಳ್ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : ಆಲೂರು ವಂಶಸ್ಥರು, ದಾವಣಗೆರೆ.

ಕೋಕಿಲ ಆಲೂರು - 90085 26999 ಪ್ರಕಾಶ್ ಆಲೂರು - 97419 57650
ತಾಯಮ್ಮ ಆಲೂರು - 93411 33260

# ರಾಜ್ಯಸಭಾ ಚುನಾವಣೆ : ಕಾಂಗ್ರೆಸ್ ಶಾಸಕರು ರೆಸಾರ್ಟ್‌ಗೆ

ಬೆಂಗಳೂರು, ಫೆ. 22 - ರಾಜ್ಯಸಭಾ ಚುನಾವಣಾ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರನ್ನು ಹಿಡಿದಿಟ್ಟುಕೊಳ್ಳಲು ಎಲ್ಲಾ ಸದಸ್ಯರನ್ನು ನಗರದ ಹೊರವಲಯದ ಐಷಾರಾಮಿ ರೆಸಾರ್ಟ್ ಒಂದಕ್ಕೆ ಸ್ಥಳಾಂತರಿಸಲಾಗುತ್ತಿದೆ.

ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಗೆ ಕಾಂಗ್ರೆಸ್‌ನಿಂದ ಕಣಕ್ಕಿಳಿದಿರುವ ಮೂವರು ಅಭ್ಯರ್ಥಿಗಳ ಗೆಲುವಿಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪಕ್ಷದ ಶಾಸಕರನ್ನು ರೆಸಾರ್ಟ್‌ನಲ್ಲಿ ಹಿಡಿದಿಡುವ ತೀರ್ಮಾನಕ್ಕೆ ಬಂದಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು, ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರನ್ನು ದೆಹಲಿಗೆ ಕರೆಸಿಕೊಂಡು ಇಂದು ಚರ್ಚೆ ಮಾಡಿದ ಬೆನ್ನಲ್ಲೇ ಕಾಂಗ್ರೆಸ್ ಈ ತೀರ್ಮಾನಕ್ಕೆ ಬಂದಿದೆ.

ಬಿಜೆಪಿ ಹಾಗೂ ಜೆಡಿಎಸ್ ತಮಗೆ ಸಾಮರ್ಥ್ಯ ಇಲ್ಲ ಎಂದು ಅರಿತಿದ್ದರೂ ಎರಡನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಅಡ್ಡ ಮತದಾನ ಮಾಡಿಸಿ, ಎರಡು ಸ್ಥಾನಗಳನ್ನು ಗೆಲ್ಲುವ ಲೆಕ್ಕಾಚಾರದಲ್ಲಿದೆ.

ಅಡ್ಡ ಮತದಾನಕ್ಕೆ ತಮ್ಮ ಶಾಸಕರಿಗೆ ಅವಕಾಶ ನೀಡಬಾರದು ಮತ್ತು ವಿರೋಧಿಗಳು ತಮ್ಮ ಸದಸ್ಯರನ್ನು ಬಲೆಗೆ ಹಾಕಿಕೊಳ್ಳಬಾರದು ಎಂಬ ಉದ್ದೇಶದಿಂದ ರೆಸಾರ್ಟ್ ರಾಜಕೀಯಕ್ಕೆ ಮೊರೆ ಹೋಗಿದ್ದಾರೆ.

ಪ್ರಸಕ್ತ ಬಜೆಟ್ ಅಧಿವೇಶನ ನಾಳೆ ಅಂತಿಮಗೊಳ್ಳಲಿದೆ, ಶುಕ್ರವಾರ ಸಂಜೆ ಯಿಂದಲೇ ಶಾಸಕರನ್ನು ಹಿಡಿದಿಟ್ಟುಕೊಳ್ಳ ಬೇಕೆಂಬ ಚರ್ಚೆಯೂ ನಡೆದಿತ್ತು.

ಹಿರಿಯ ಶಾಸಕರ ಸಲಹೆ ಮೇರೆಗೆ ಸದನ ಮುಗಿದ ಬಳಿಕ ಶಾಸಕರು ತಮ್ಮ ಊರಿಗೆ ತೆರಳಲಿ, ಸೋಮವಾರ ನಡೆಯುವ ಪಕ್ಷದ ಶಾಸಕರು, ಮುಖಂಡರ ಸಭೆಯಲ್ಲಿ ಭಾಗವಹಿ ಸುವಂತೆ ಕಡ್ಡಾಯವಾಗಿ ಸೂಚಿಸಲಾಗಿದೆ.

ಕಾಂಗ್ರೆಸ್ ಕಚೇರಿಯಲ್ಲಿ ನಡೆಯುವ ಸಭೆ ನಂತರ ಎಲ್ಲಾ ಶಾಸಕರನ್ನು ರೆಸಾರ್ಟ್‌ಗೆ ಕರೆದುಕೊಂಡು ಹೋಗಿ, ರಾತ್ರಿ ಅಲ್ಲೇ ತಂಗಿದ್ದು, ಮರುದಿನ ಅಂದರೆ ಫೆಬ್ರವರಿ 27ರ ಬೆಳಗ್ಗೆ ಮತಗಟ್ಟೆಗೆ ಕರೆತರಲಿದ್ದಾರೆ.

ಅಂದಿನ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸುತ್ತಿಲ್ಲ. ಕೆಪಿಸಿಸಿ ಅಧ್ಯಕ್ಷರಾಗಿರುವ ಉಪಮುಖ್ಯಮಂತ್ರಿ ಅವರೇ ಸಭೆ ನಡೆಸಿ ಅವರ ನಾಯಕತ್ವದಲ್ಲೇ ಶಾಸಕರನ್ನು ರೆಸಾರ್ಟ್‌ಗೆ ಕರೆದೊಯ್ಯಲಿದ್ದಾರೆ.

ರೆಸಾರ್ಟ್‌ನಲ್ಲೇ ತಮ್ಮ ಪಕ್ಷದ ಯಾವ ಅಭ್ಯರ್ಥಿಗಳಿಗೆ ಯಾವ ಶಾಸಕರು ಮತ ಚಲಾಯಿಸಬೇಕೆಂಬ ಬಗ್ಗೆಯೂ ವಿಪ್ ನೀಡುವುದಲ್ಲದೆ, ಮಾದರಿ ಮತ ಪತ್ರವನ್ನು ನೀಡಿ, ವಿವರಿಸಲಿದ್ದಾರೆ.

ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಕನಿಷ್ಠ 45 ಮತಗಳ ಅಗತ್ಯವಿದ್ದು, ತಮ್ಮ ಮೂವರು ಅಭ್ಯರ್ಥಿಗಳಿಗೂ ತಲಾ 46 ಮತಗಳನ್ನು ಹಂಚಿ ವಿಪ್ ನೀಡಲಿದ್ದಾರೆ.

ರೆಸಾರ್ಟ್‌ನಿಂದ ಪ್ರತ್ಯೇಕವಾಗಿ ಮೂರು ಗುಂಪುಗಳಾಗಿ ಮತಗಟ್ಟೆಗೆ ಧಾವಿಸಿ ಮತ ಚಲಾಯಿಸುವ ವ್ಯವಸ್ಥೆಯನ್ನು ಕಾಂಗ್ರೆಸ್ ಮಾಡಿದೆ.

ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಸ್ಪಷ್ಟ ಸಂಖ್ಯಾಬಲವಿದೆ, ಬಿಜೆಪಿ ತನ್ನ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳಲು 45 ಮತಗಳನ್ನು ನಿಗದಿ ಮಾಡಿದ ನಂತರ ಉಳಿಯುವ 21 ಮತಗಳನ್ನು ಎನ್‌ಡಿಎ ಕೂಟದ ಜೆಡಿಎಸ್ ಅಭ್ಯರ್ಥಿ ಕುಪೇಂದ್ರ ರೆಡ್ಡಿಗೆ ಹಂಚಲಿದ್ದಾರೆ. ಜೆಡಿಎಸ್‌ನ 19 ಮತಗಳು ಜೊತೆಗೆ ಬಿಜೆಪಿಯ 21 ಸೇರಿ 40 ಮತಗಳಾಗಲಿವೆ.

ರೆಡ್ಡಿ ಗೆಲುವಿಗೆ ಇನ್ನೂ ಐದು ಮತಗಳ ಅಗತ್ಯವಿದೆ, ಇವುಗಳನ್ನು ಪಡೆಯಲು ಪಕ್ಷೇತರರು ಮತ್ತು ಕಾಂಗ್ರೆಸ್ ಬುಟ್ಟಿಗೆ ಬಿಜೆಪಿ-ಜೆಡಿಎಸ್ ಕೈಹಾಕಿದೆ.

ಚುನಾವಣೆಗೆ ಸಂಬಂಧಿಸಿದಂತೆ ಕುಮಾರಸ್ವಾಮಿ ಜೊತೆಗೆ ಅಮಿತ್ ಷಾ ಚರ್ಚೆ ನಡೆಸಿರುವುದು ಹಾಗೂ ಬಿಜೆಪಿ-ಜೆಡಿಎಸ್ ಜಂಟಿಯಾಗಿ ತಮ್ಮ ಶಾಸಕರನ್ನು ಸೆಳೆಯಬಹುದೆಂಬ ಸುಳಿವಿನ ಹಿನ್ನೆಲೆಯಲ್ಲಿ ಕಾಂಗ್ರೆಸ್ ರೆಸಾರ್ಟ್ ರಾಜಕೀಯಕ್ಕೆ ಮೊರೆ ಹೋಗಿದೆ.

# ಭಗವಂತನಲ್ಲಿ ಭಕ್ತಿ ನಂಬಿಕೆ ಇದ್ದಲ್ಲಿ ಬದುಕಿನಲ್ಲಿ ಸಾರ್ಥಕತೆ ಕಾಣುತ್ತೀರಿ



### ಮಲೇಬೆನ್ನೂರಿನ ಮೈಲಾರಲಿಂಗೇಶ್ವರ ದೇವಸ್ಥಾನ ಲೋಕಾರ್ಪಣೆಯಲ್ಲಿ ರಟ್ಟಿಹಳ್ಳಿ ಶ್ರೀ

ಮಲೇಬೆನ್ನೂರು, ಫೆ. 22- ಭಗವಂತನ ಮೇಲೆ ಭಕ್ತಿ, ನಂಬಿಕೆ ಇದ್ದಲ್ಲಿ ನಿಮ್ಮ ಬದುಕಿನಲ್ಲಿ ಸಾರ್ಥಕತೆ ಕಾಣುತ್ತೀರಿ ಎಂದು ರಟ್ಟಿಹಳ್ಳಿಯ ಕಬ್ಬಿಣಕಂಥಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ಭಕ್ತರಿಗೆ ತಿಳಿಸಿದರು.

ಅವರು ಪಟ್ಟಣದ ಜಿಗಳಿ ರಸ್ತೆಯಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಮೈಲಾರ ಲಿಂಗೇಶ್ವರ ದೇವಸ್ಥಾನವನ್ನು ಬುಧವಾರ ಲೋಕಾರ್ಪಣೆಗೊಳಿಸಿ ಮತ್ತು ಕಳಸಾರೋಹಣ ನೆರವೇರಿಸಿ ಆಶೀರ್ವಚನ ನೀಡಿದರು. ಶಿಬಾರ ಕಟ್ಟೆಗೆ ನಮಿಸಿ ಗ್ರಾಮ ಪ್ರವೇಶ ಮಾಡಲಿ ಎಂದು ಪೂರ್ವಜರು ಬಹುತೇಕ ಗ್ರಾಮಗಳ ಹೊರಭಾಗದಲ್ಲಿ ಶಿಬಾರ ಕಟ್ಟೆಯನ್ನು ಪ್ರತಿಷ್ಠಾಪಿಸುವುದು ವಾಡಿಕೆಯಾಗಿತ್ತು.

ಶಿವನ ಕೈಯಲ್ಲಿರುವ ತ್ರಿಶೂಲದ ಮೂರು ಚೂಪಾದ ಮೊನಚುಗಳು ರಜಸ್ಸು, ತಮಸ್ಸು, ಸತ್ವ ಎಂಬ ಮೂರು ಗುಣಗಳ ಸಂಕೇತವಾಗಿವೆ. ಆದ್ದರಿಂದ ಪರಮೇಶ್ವರನನ್ನು ತ್ರಿಗುಣಾತೀತ ಎಂದು ಕರೆಯುವರು.

ಮನುಷ್ಯರಲ್ಲಿ ಯಾವ ಗುಣ ಹೆಚ್ಚಿರುತ್ತೋ ಆ ರೀತಿ ವರ್ತಿಸುತ್ತಾನೆ. ಪ್ರತಿಯೊಬ್ಬರೂ ಈ ಮೂರು ಗುಣಗಳನ್ನು ಮೀರಿ ಜೀವಿಸಬೇಕು ಎಂದರು.

ಬರಗಾಲದಲ್ಲೂ ದೇಣಿಗೆ ನೀಡಿ ಧಾರ್ಮಿಕ ಕಾರ್ಯಗಳಿಗೆ ಸಹಕರಿಸುವ ಭಕ್ತರ ಕೊರತೆಯಿಲ್ಲ. ಪ್ರತಿಯೊಬ್ಬರೂ ವಿಲಾಸಿ ಜೀವನದಿಂದ ವಿಮುಕ್ತರಾಗಿ, ಧಾರ್ಮಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ಸ್ವಾಮೀಜಿ ಕರೆ ನೀಡಿದರು.

ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ಮತ್ತು ಗಂಗಮಾಳಮ್ಮ ದೇವಿಗೆ ಹಾಗೂ ಶಿಬಾರ ಕಟ್ಟೆಗೆ ಹೂವಿನಿಂದ ಅಲಂಕರಿಸಲಾಗಿತ್ತು.

ಗೋಪುರ ನಿರ್ಮಿಸಿದ ಹಳ್ಳೂರು ವಸಂತಪ್ಪ ಅವರನ್ನು ಸನ್ಮಾನಿಸಲಾಯಿತು. ಕಮಿಟಿಯ ಅಧ್ಯಕ್ಷ ಮೈಲಾರಪ್ಪ, ಉಪಾಧ್ಯಕ್ಷ ನಿಟುವಳ್ಳಿ ನಿಂಗಪ್ಪ, ಕಾರ್ಯದರ್ಶಿ ಎಂ.ಕೆ. ರಾಮಶೆಟ್ಟಿ, ಖಜಾಂಚಿ ತಿಪ್ಪೇಶಪ್ಪ, ಮುಖಂಡರಾದ ಹೆಚ್.ಜೆ. ಉಮೇಶ್, ಮಾಸಣಗಿ ಶೇಖರಪ್ಪ, ಸಿರಿಗೆರೆ ನಿಂಗಪ್ಪ, ಕಣ್ಣಾಳ್ ಪರಶುರಾಮಪ್ಪ, ಕೆ. ಚಂದ್ರಣ್ಣ, ಕೆ. ಕೊಟ್ರೇಶ್, ಹಾಲೇಶ್, ನಿಟುವಳ್ಳೇರ ರಾಜು, ರಾಮಣ್ಣ ರೊಡ್ಡಮಲ್ಲಾಚಾರಿ, ಗಂಗಾಧರ, ರವಿ, ಜಿಗಳೇರ ಮಾರುತಿ, ಜಿಗಳಿ ನಾಗಣ್ಣ, ಚಿಕ್ಕಣ್ಣ, ಮಂಜಣ್ಣ, ಗಿರೀಶ್ ಹಳ್ಳೂರು ಮತ್ತಿತರರು ಈ ವೇಳೆ ಹಾಜರಿದ್ದರು.

# ಹರಿಹರದಲ್ಲಿ ಶ್ರೀ ಮೌನೇಶ್ವರ ದೇವಸ್ಥಾನ ನವೀಕರಣ; ಕುಂಭಮೇಳ



ಹರಿಹರ, ಫೆ. 22- ನಗರದಲ್ಲಿ ಶ್ರೀ ಗುರು ಮೌನೇಶ್ವರ ಸ್ವಾಮಿ ದೇವಸ್ಥಾನ ನವೀಕರಣ ನಿಮಿತ್ತ ಪಲ್ಲಕ್ಕಿ ಉತ್ಸವದ, ಜೊತೆಗೆ ಸಮಾಜದ ಮಹಿಳೆಯರ ಕುಂಭಮೇಳ ಮೆರವಣಿಗೆಯು ವಿವಿಧ ಕಲಾ ಮೇಳಗಳೊಂದಿಗೆ ಅದ್ದೂರಿಯಾಗಿ ಮತ್ತು ಸಡಗರ ಸಂಭ್ರಮದಿಂದ ನಡೆಯಿತು.

# ಭರತ ಹುಣ್ಣಿಮೆ : ಉಚ್ಚಂಗಿದುರ್ಗಕ್ಕೆ ಬಸ್ ವ್ಯವಸ್ಥೆ

ದಾವಣಗೆರೆ, ಫೆ.22- ಶ್ರೀಕ್ಷೇತ್ರ ಉಚ್ಚಂಗಿದುರ್ಗದ ಭರತ ಹುಣ್ಣಿಮೆಯು ನಾಳೆ ದಿನಾಂಕ 23 ರಿಂದ 25 ರವರೆಗೆ ಜರುಗಲಿದೆ.

ಭಕ್ತಾದಿಗಳ ಅನುಕೂಲಕ್ಕಾಗಿ ರಾಜ್ಯ ರಸ್ತೆ ಸಾರಿಗೆ ನಿಗಮವು ದಾವಣಗೆರೆ ವಿಭಾಗದ ಘಟಕಗಳಿಂದ 60 ಹೆಚ್ಚುವರಿ ವಿಶೇಷ ವಾಹನಗಳ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

# ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ಕಾರಣಿಕೋತ್ಸವಕ್ಕೆ ಸಿದ್ಧತೆ

**ಹಡಗಲಿ**

ಹೂವಿನಹಡಗಲಿ, ಫೆ. 22- ತಾಲ್ಲೂಕಿನ ಸುಪ್ರಸಿದ್ಧ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ಕಾರಣಿಕೋತ್ಸವ ಇದೇ ದಿನಾಂಕ 26ರಂದು ವಿಜೃಂಭಣೆಯಿಂದ ಜರುಗಲಿದೆ. ಜಾತ್ರೆಗೆ ಬರುವ ಲಕ್ಷಾಂತರ ಭಕ್ತರ ಅನುಕೂಲಕ್ಕಾಗಿ ಜಿಲ್ಲಾಡಳಿತ ಮತ್ತು ತಾಲ್ಲೂಕು ಆಡಳಿತ ಸನ್ನದ್ಧವಾಗಿವೆ.ಜೊತೆಗೆ ಹಿಂದೂ ಧಾರ್ಮಿಕ ದತ್ತಿ ಇಲಾಖೆ ಕೂಡ ಸಕಲ ಸಿದ್ಧತೆಯಲ್ಲಿ ತೊಡಗಿದೆ. ಈಗಾಗಲೇ ಜಿಲ್ಲಾಧಿಕಾರಿಗಳು ಪೂರ್ವಭಾವಿ ಸಭೆಯನ್ನು ನಡೆಸಿ, ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಂಡಿದ್ದಾರೆ.

ಕ್ಷೇತ್ರದ ಶಾಸಕ ಕೃಷ್ಣ ನಾಯ್ಕ ಕೂಡಾ ಜಾತ್ರೆಯ ಬಗ್ಗೆ ನಿಗಾ ವಹಿಸಿದ್ದಾರೆ. ಸಾರಿಗೆ, ಆರೋಗ್ಯ, ಪಶು ಆರೋಗ್ಯ, ಕುಡಿಯುವ ನೀರು, ನೈರ್ಮಲ್ಯ, ಶೌಚಾಲಯಗಳ ನಿರ್ಮಾಣ, ತಾತ್ಕಾಲಿಕ ಆಸ್ಪತ್ರೆ ಹಾಗೂ ಸೂಕ್ತವಾದ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗುತ್ತಿದೆ. ಈ ಬಾರಿಯ ವಿಶೇಷವೆಂದರೆ ಹಿಂದೂ ಧಾರ್ಮಿಕ ದತ್ತಿ ಇಲಾಖೆ ಕಾರಣಿಕೋತ್ಸವದ ನುಡಿ ಸ್ಪಷ್ಟವಾಗಿ ಕೇಳಿಸಲು ವಿಶೇಷ ಧ್ವನಿವರ್ಧಕಗಳನ್ನು ವ್ಯವಸ್ಥೆ ಗೊಳಿಸಿದೆ.

ಅಲ್ಲದೇ, ದೇವಸ್ಥಾನದ ಗೋಪುರಗಳಿಗೆ ಬಣ್ಣ ಮತ್ತು ಅಲಂಕಾರಕ್ಕಾಗಿ ವಿದ್ಯುತ್ ದೀಪಗಳನ್ನು ಬಳಸಲಾಗಿದೆ. ಈಗಾಗಲೇ ಸರ್ಕಾರ ಭದ್ರಾ ಡ್ಯಾಮ್ ನಿಂದ ತುಂಗಭದ್ರಾ ನದಿಗೆ ಜಾತ್ರೆ ಅಂಗವಾಗಿ ನೀರನ್ನು ಬಿಟ್ಟಿದೆ. ಗ್ರಾಮ ಪಂಚಾಯತಿ ಕೂಡಾ ತನ್ನದೇ ಆದ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ.

ಜಾತ್ರೆ ಪ್ರದೇಶದಲ್ಲಿ ಧೂಳು ಹರಡದಂತೆ ಟ್ಯಾಂಕರ್ ಮೂಲಕ ರಸ್ತೆಗಳಿಗೆ ನೀರನ್ನು ಸಿಂಪಡಿಸಲಾಗುತ್ತಿದೆ. ಮುಜರಾಯಿ ಇಲಾಖೆ ಈಗಾಗಲೇ ದೇವಸ್ಥಾನದಲ್ಲಿ ಸಂಗ್ರಹವಾಗಿದ್ದ ಹುಂಡಿಗಳನ್ನು ತೆರೆದು ಎಣಿಕೆ ಮಾಡಲಾಗಿದ್ದು, ಸುಮಾರು 50 ಲಕ್ಷ ರೂ.ಗಳಷ್ಟು ಭಕ್ತರ ಕಾಣಿಕೆ ಹಣ ಸಂಗ್ರಹವಾಗಿದೆ. ಜಾತ್ರೆಗೆ ಬರುವ ವಾಹನ ಹಾಗೂ ಎತ್ತಿನ ಬಂಡಿಗಳಿಗೆ ಯಾವುದೇ ಶುಲ್ಕವನ್ನು ವಿಧಿಸಲಾಗುತ್ತಿಲ್ಲ.

ಈಗಾಗಲೇ ತುಂಗಭದ್ರಾ ನದಿಯ ಪ್ರದೇಶ ಹಾಗೂ ಮೈಲಾರದ ಅಕ್ಕಪಕ್ಕದ ಹೊಲಗಳಲ್ಲಿ ಭಕ್ತರು ತಮ್ಮ ಸ್ಥಳಗಳನ್ನು ಕಾಯ್ದಿರಿಸಿಕೊಂಡಿದ್ದಾರೆ.

ವಿವಿಧ ವಿನೋದಾವಳಿಗಳು, ನಾಟಕ ಕಂಪನಿಗಳು, ಮಿಠಾಯಿ ಅಂಗಡಿಗಳು ಹಾಗೂ ಇನ್ನಿತರೆ ವ್ಯಾಪಾರಸ್ಥರು ಬರತೊಡಗಿದ್ದಾರೆ. ಡೆಂಕನಮರಡಿಯಲ್ಲಿ ಜರುಗುವ ಕಾರಣಿಕೋತ್ಸವದ ಅಂಗವಾಗಿ ಬ್ಯಾರಿಕೇಡ್ ವ್ಯವಸ್ಥೆ ಮಾಡಲಾಗಿದೆ.

ಭಕ್ತರ ನೂಕು ನುಗ್ಗಲನ್ನು ನಿಯಂತ್ರಿಸಲು ಮುಂಜಾಗ್ರತಾ ಕ್ರಮಗಳನ್ನು ಪೊಲೀಸ್ ಇಲಾಖೆ ಕೈಗೊಂಡಿದೆ. ಯಾವುದೇ ಕಾರಣಕ್ಕೂ ಟ್ರಾಫಿಕ್ ಸಮಸ್ಯೆ ಆಗದಂತೆ ಎಚ್ಚರಿಕೆ ವಹಿಸಬೇಕಾಗಿದೆ. ಕೊರೊನಾ ಹಿನ್ನೆಲೆಯಲ್ಲಿ ಎರಡು ವರ್ಷಗಳ ಕಾಲ ಜಾತ್ರೆ ಅಷ್ಟೊಂದು ವಿಜೃಂಭಣೆಯಿಂದ ಜರುಗಿರಲಿಲ್ಲ. ಹಾಗಾಗಿ ಈ ವರ್ಷ ಜಾತ್ರೆಗೆ ಹೊಸ ಕಳೆ ಕಟ್ಟುವ ಸಾಧ್ಯತೆ ಹೆಚ್ಚಾಗಿದೆ. ಕಳೆದ 16ರ ರಥಸಪ್ತಮಿ ದಿನದಿಂದ ಜಾತ್ರೆ ವಿಧ್ಯುಕ್ತವಾಗಿ ಆರಂಭಗೊಂಡಿದೆ.

# 55 ಲಕ್ಷ ಶಾಲಾ ಮಕ್ಕಳಿಗೆ ರಾಗಿ ಮಾಲ್ಟ್

## ರಕ್ತಹೀನತೆ, ಪೌಷ್ಟಿಕಾಂಶದ ಕೊರತೆ ನೀಗಿಸಿದಾಗ ಓದಿನಲ್ಲಿ ಚುರುಕು : ಸಿಎಂ




ಬೆಂಗಳೂರು, ಫೆ. 22 - 'ಉತ್ತಮ ಪೌಷ್ಟಿಕಾಂಶ ಉತ್ತಮ ಶಿಕ್ಷಣಕ್ಕೆ ರಹದಾರಿ' ಎಂಬ ಕಾರ್ಯಕ್ರಮದಡಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಸರ್ಕಾರಿ ಶಾಲೆಗಳ 55 ಲಕ್ಷ ಮಕ್ಕಳ ಮಾನಸಿಕ, ದೈಹಿಕ ಆರೋಗ್ಯಕ್ಕಾಗಿ ರಾಗಿ ಮಾಲ್ಟ್ ವಿತರಣೆ ಆರಂಭಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ರಾಗಿ ಹೆಲ್ತ್ ಮಿಕ್ಸ್ ವಿತರಣೆ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಲ್ಲಿನ ರಕ್ತಹೀನತೆ ಮತ್ತು ಪೌಷ್ಠಿಕಾಂಶದ ಕೊರತೆ ನೀಗಿಸಿದಾಗ ಮಾತ್ರ ಮಾನಸಿಕ ವಾಗಿ ಸದೃಢರಾಗಿ ಓದಿನಲ್ಲಿ ಹೆಚ್ಚು ಚುರುಕಾಗುತ್ತಾರೆ. ಗುಣಮಟ್ಟದ ಶಿಕ್ಷಣ ಪಡೆದು ಕೊಳ್ಳುತ್ತಾರೆ. ಶ್ರೀಮಂತರ ಮಕ್ಕಳಂತೆ ಬಡವರು, ಶ್ರಮಿಕರು, ದಲಿತ, ಶೂದ್ರರ ಮಕ್ಕಳಿಗೂ ಉತ್ತಮ ಶಿಕ್ಷಣ ದೊರೆಯಬೇಕು. ಮಕ್ಕಳೇ ದೇಶ ಹಾಗೂ ಸಮಾಜದ ಭವಿಷ್ಯ ಎಂದರು.

ಶಿಕ್ಷಣದಿಂದ ಮಾತ್ರ ಸ್ವಾಭಿಮಾನ, ಜ್ಞಾನದ ಬೆಳವಣಿಗೆ ಸಾಧ್ಯ. ಶಿಕ್ಷಣ ಕೇವಲ ಓದು, ಬರಹ ಕಲಿಸುವುದಲ್ಲ. ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವ ವೈಚಾರಿಕತೆ ಯುಳ್ಳ ಶಿಕ್ಷಣ ಅಗತ್ಯ. ಇಂದಿನ ದಿನಗಳಲ್ಲಿ ವೈದ್ಯರು, ಎಂಜಿನಿಯರ್‌ಗಳೂ ಮೌಢ್ಯಕ್ಕೆ ಜೋತು ಬಿದ್ದಿದ್ದಾರೆ. ಬಸವಾದಿ ಶರಣರು ಮೌಢ್ಯಮುಕ್ತ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ್ದರು. ವೈಚಾರಿಕ ಶಿಕ್ಷಣದಿಂದ ಮಾತ್ರ ಮೌಢ್ಯಮುಕ್ತ ಸಮಾಜ ನಿರ್ಮಾಣ ಸಾಧ್ಯ ಎಂದರು.

2013ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಹಾಲು ಉತ್ಪಾದನೆ ಹೆಚ್ಚಾಯಿತು, ಇದಕ್ಕೆ ತಕ್ಕಂತೆ ಹಾಲಿನ ಮಾರಾಟ ಮತ್ತು ಉಪ ಉತ್ಪನ್ನ ಗಳನ್ನೂ ಹೆಚ್ಚು ಮಾಡಲು ಸಾಧ್ಯವಿಲ್ಲದ ಕಾರಣ, ಸರ್ಕಾರಿ ಶಾಲಾ ಮಕ್ಕಳಿಗೆ ವಾರದಲ್ಲಿ ಐದು ದಿನ ಹಾಲು ಕೊಡುವ ಕ್ಷೀರಭಾಗ್ಯ ಯೋಜನೆ ಹಾಗೂ ನಂತರ ಕಳೆದ ಬಜೆಟ್‌ನಲ್ಲಿ ವಾರಕ್ಕೆ ಎರಡು ದಿನ ಮೊಟ್ಟೆ ಕೊಡುವ ಕಾರ್ಯಕ್ರಮ ಆರಂಭಿಸಲಾಯಿತು ಎಂದರು.

# ಸಿರಿಗೆರೆಯ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿಂದು



ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ ಸಿರಿಗೆರೆ ಇವರ ವತಿ ಯಿಂದ ನಡೆಯುತ್ತಿರುವ 'ತರಳಬಾಳು ಹುಣ್ಣಿಮೆ ಮಹೋತ್ಸವ'ದಲ್ಲಿ

ಇಂದು ಸಂಜೆ 6 ಗಂಟೆಗೆ ಹಂಪಿ-ಹೊಸಪೇಟೆ-ಹಾಲಕೆರೆಯ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನ ಮಠದ ಶ್ರೀ ನಿರಂಜನ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಶ್ರೀಮತಿ ಲಕ್ಷ್ಮಿ ಹೆಬ್ಬಾಳ್ಕರ್, ಮಾಜಿ ಸಚಿವ ಹೆಚ್. ಆಂಜನೇಯ, ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್, ಹಿರೇಕೆರೂರು ಶಾಸಕ ಯು.ಬಿ. ಬಣಕಾರ, ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಮೈಸೂರಿನ ಡಿಸಿಆರ್‌ಇ ಪೊಲೀಸ್ ಅಧೀಕ್ಷಕರಾದ ಡಾ. ಬಿ.ಟಿ. ಕವಿತಾ, ಶ್ರೀಮತಿ ಅನುಸೂಯಮ್ಮ (ಚಿಕಾಗೋ, ಯುಎಸ್‌ಎ), ಚಿತ್ರದುರ್ಗ ಜಿಲ್ಲಾಧಿಕಾರಿ ಟಿ. ವೆಂಕಟೇಶ್, ಮೈಸೂರಿನ ಕಬಿನಿ ಯೋಜನೆಯ ವಿಶೇಷ ಭೂಸ್ವಾಧೀನಾಧಿಕಾರಿ ಬಿ. ಸುಪ್ರಿಯ ಬಣಗಾರ್, ಎಸ್.ಎಸ್. ಕೇರ್ ಟ್ರಸ್ಟ್ ಟ್ರಸ್ಟಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅತಿಥಿಗಳಾಗಿದ್ದಾರೆ.

'ಮಹಿಳೆ ಮತ್ತು ಅಧ್ಯಾತ್ಮ ಚಿಂತನೆ' ವಿಷಯ ಕುರಿತು ಉಪನ್ಯಾಸಕರಾದ ಶ್ರೀಮತಿ ನಾಗಶ್ರೀ ತ್ಯಾಗರಾಜ್ (ಬೇಲೂರು) ಮತ್ತು 'ಸಾಂಕ್ರಾಮಿಕ ರೋಗಗಳು : ಭಯ ಬೇಡ, ಎಚ್ಚರವಿರಲಿ' ವಿಷಯ ಕುರಿತು ಡಾ. ಎಂ.ಜಿ. ಉಷಾ (ದಾವಣಗೆರೆ) ಅವರಿಂದ ವಿಷಯ ಮಂಡನೆ ನಡೆಯಲಿದೆ.

# ಅನಾರೋಗ್ಯ ಪೀಡಿತ ಬಿಜೆಪಿ ಕಾರ್ಯಕರ್ತನಿಗೆ ಧನ ಸಹಾಯ



ದಾವಣಗೆರೆ, ಫೆ. 22 - ಬಿಜೆಪಿಯ ಹಿರಿಯ ಮತ್ತು ನಿಷ್ಠಾವಂತ ಕಾರ್ಯಕರ್ತ ಯಲ್ಲಮ್ಮ ನಗರದ ನಾಗರಾಜ್ ಪಾರ್ಶ್ವವಾಯುಗೊಳಗಾಗಿದ್ದು, ಅವರಿಗೆ ಬಿಜೆಪಿ ನಿಷ್ಠಾವಂತ ಕಾರ್ಯಕರ್ತರ ವೇದಿಕೆ ಮತ್ತು ಅಟಲ್ ಬಿಹಾರಿ ವಾಜಪೇಯಿ ಬಳಗದ ವತಿಯಿಂದ ಧನ ಸಹಾಯ ಮಾಡುವುದರ ಮೂಲಕ ಸಾಂತ್ವನ ಹೇಳಲಾಯಿತು.


ವೇದಿಕೆಯ ಜಿಲ್ಲಾಧ್ಯಕ್ಷ ಕೃಷ್ಣಮೂರ್ತಿ ಪವಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್. ಲಿಂಗರಾಜು, ಕಾರ್ಯಾಲಯ ಕಾರ್ಯದರ್ಶಿ ಗೌಳಿ ಲಿಂಗರಾಜು ಅವರುಗಳು ನಾಗರಾಜ್ ಅವರ ಮನೆಗೆ ತೆರಳಿ ಆರೋಗ್ಯ ವಿಚಾರಿಸಿ, ಶೀಘ್ರ ಗುಣಮುಖರಾಗುವಂತೆ ಹಾರೈಸಿದರು.

# ಮಲೇಬೆನ್ನೂರಿನಲ್ಲಿ ಇಂದು ಕ್ರಿಕೆಟ್ ಟೂರ್ನಿ

ನೀರಾವರಿ ಇಲಾಖೆಯ ಮೈದಾನದಲ್ಲಿ ಇಂದಿನಿಂದ ಮೂರು ದಿನ ಪ್ರಥಮ ಬಾರಿಗೆ ಕೊಮಾರನಹಳ್ಳಿ ಪ್ರಿಮಿಯರ್ ಲೀಗ್ ಕ್ರಿಕೆಟ್ ಟೂರ್ನಮೆಂಟನ್ನು ಹಮ್ಮಿಕೊಳ್ಳಲಾಗಿದೆ ಎಂದು ಬಿ.ಎಂ.ಚೇತನ್, ಯು.ಹೆಚ್.ಅಣ್ಣಪ್ಪ ತಿಳಿಸಿದ್ದಾರೆ. ಇಂದು ಬೆಳಿಗ್ಗೆ 10.30ಕ್ಕೆ ಕ್ರಿಕೆಟ್ ಟೂರ್ನಿಯನ್ನು ಇನ್‌ಸೈಟ್ಸ್ ಸಂಸ್ಥಾಪಕ ಜಿ.ಬಿ.ವಿನಯಕುಮಾರ್ ಉದ್ಘಾಟಿಸಲಿದ್ದು, ಪಿಡಬ್ಲ್ಯೂಡಿ ಕ್ರಿಕೆಟರ್ಸ್‌ನ ಆಂಜನೇಯ ಅಧ್ಯಕ್ಷತೆ ವಹಿಸುವರು.

ಅತಿಥಿಗಳು : ಎಸ್.ರಾಮಪ್ಪ, ನಂದಿಗಾವಿ ಶ್ರೀನಿವಾಸ್, ಹನಗವಾಡಿ ಕುಮಾರ್, ಪಿ.ಎಸ್. ಹನುಮಂತಪ್ಪ, ಜಿ.ಮಂಜುನಾಥ್ ಪಟೇಲ್, ಜಿಗಳಿ ಆನಂದಪ್ಪ, ಎಂ.ಬಿ.ಹಬೀದ್ ಅಲಿ, ಕೆ.ಪಿ. ಗಂಗಾಧರ್, ಕೆ.ಜಿ.ಲೋಕೇಶ್ ಮತ್ತಿತರರು.


**ಭಾವಪೂರ್ಣ ಶ್ರದ್ಧಾಂಜಲಿ**



ಸಿಟಿ ಹೈಟೆಕ್ ಇಮೇಜಿಂಗ್ ಸರ್ವೀಸಸ್ ಸಂಸ್ಥೆಯನ್ನು ಸ್ಥಾಪಿಸಿ, ನಮ್ಮ ಆಸ್ಪತ್ರೆಗೆ ರೇಡಿಯಾಲಜಿ ಸೇವೆಗಳನ್ನು ಸಕಾಲಕ್ಕೆ ಒದಗಿಸಿಕೊಟ್ಟು ಏಳ್ಗೆಗೆ ಕಾರಣರಾದ

**ಡಾ|| ಎಸ್. ಆರ್. ಮರಳೀಹಳ್ಳಿ** ಇವರು

ದಿನಾಂಕ : 20-02-2024 ರಂದು ನಿಧನರಾಗಿದ್ದು,

**ಕೃತಜ್ಞತಾ ಪೂರ್ವಕ ಶ್ರದ್ಧಾಂಜಲಿ ಅರ್ಪಿಸುವ**

**ಸಿಟಿ ಸೆಂಟ್ರಲ್ ಹಾಸ್ಪಿಟಲ್ ಪ್ರೈ ಲಿ,**

ದಾವಣಗೆರೆ

**ಡಾ. ಹೆಚ್. ಎಲ್. ಸುಬ್ಬರಾವ್** ಮತ್ತು

**ಸಿಸಿಹೆಚ್ ಬಳಗ.**


# ರೈಲು ಮಾರ್ಗದ ಗಿಡಗಳಿಗೆ ಬೆಂಕಿ: ತನಿಖೆಗೆ ವಿಶ್ವ ಕರವೇ ಆಗ್ರಹ




ಹರಿಹರ, ಫೆ. 22- ನಗರದ ಹೊರವಲಯದ ದಾವಣಗೆರೆ ಮಾರ್ಗದ ರೈಲ್ವೆ ಹಳಿಗಳ ಅಕ್ಕಪಕ್ಕದ ಗಿಡಗಂಟಿಗಳಿಗೆ ಬೆಂಕಿ ಹಾಕಿರುವ ಪ್ರಕರಣ ಕುರಿತು ತನಿಖೆ ನಡೆಸಬೇಕೆಂದು ವಿಶ್ವ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಉಪಾಧ್ಯಕ್ಷ ನಾಗರಾಜ್ ಭಂಡಾರಿ ಆಗ್ರಹಿಸಿದ್ದಾರೆ.

ವೇದಿಕೆಯ ಪದಾಧಿಕಾರಿಗಳೊಂದಿಗೆ ಬೆಂಕಿ ಹಾಕಿದ ಸ್ಥಳಕ್ಕೆ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಮಾರ್ಗದ ರೈಲ್ವೆ ಹಳಿಗಳ ಅಕ್ಕಪಕ್ಕದಲ್ಲಿ ಸುಮಾರು ಒಂದು ಕಿ.ಮೀ. ಉದ್ದಕ್ಕೆ ಹಾಗೂ ಎರಡು ಜೋಡಿ ರೈಲು ಹಳಿಗಳ ಮಧ್ಯ ಭಾಗದ ಗಿಡಗಂಟಿಗಳಿಗೆ ಫೆ.16 ರಂದು ಬೆಂಕಿ ಹಾಕಲಾಗಿದೆ.

ಡಿಜಿಆರ್ ಅಮ್ಯೂಸ್‌ಮೆಂಟ್ ಪಾರ್ಕ್ ಬಳಿ ಇರುವ ರೈಲ್ವೆ ಲೆವೆಲ್ ಕ್ರಾಸಿಂಗ್‌ವರೆಗೂ ಗಿಡ, ಗಂಟಿ ಸುಡಲಾಗಿದೆ. ದಿನದ 24 ಗಂಟೆಯೂ ಲೆವೆಲ್ ಕ್ರಾಸಿಂಗ್‌ನಲ್ಲಿ ರೈಲ್ವೆ ಸಿಬ್ಬಂದಿ ಇರುತ್ತಾರೆ. ಲೆವೆಲ್ ಕ್ರಾಸಿಂಗ್ ಪಕ್ಕದಲ್ಲಿ ಬೆಂಕಿ ಹಚ್ಚಿದರೂ ಅವರು ಗಮನಿಸಲಿಲ್ಲವೇ ? ಎಂಬ ಪ್ರಶ್ನೆ ಮೂಡಿದೆ. ರೈಲ್ವೆ ಸಿಬ್ಬಂದಿಯಿಂದ ಗಿಡಗಂಟಿಗಳಿಗೆ ಬೆಂಕಿ ಹಾಕಿಲ್ಲ ಎಂದು ರೈಲ್ವೆ ಇಲಾಖೆ ಅಧಿಕಾರಿಗಳು ಹೇಳಿಕೆ ನೀಡಿದ್ದಾರೆ, ಹಾಗಾದರೆ ಯಾರೋ ಖಾಸಗಿ ವ್ಯಕ್ತಿ ಬಂದು ರೈಲ್ವೆ ಪರಿಸರದಲ್ಲಿ ಏಕೆ ಬೆಂಕಿ ಹಾಕುತ್ತಾರೆ? ಖಾಸಗಿ ವ್ಯಕ್ತಿಗಳು ರೈಲ್ವೆ ಪರಿಸರದಲ್ಲಿ ಬಂದು ಬೆಂಕಿ ಹಚ್ಚಿದರೆ ದಿನಕ್ಕೆ 60 ರೈಲುಗಳು ಸಂಚರಿಸುವ ಈ ಮಾರ್ಗದ ಸುರಕ್ಷತೆ ಎಷ್ಟರ ಮಟ್ಟಿಗೆ ಇದೆ ಎಂಬ ಪ್ರಶ್ನೆ ಮೂಡುತ್ತದೆ.

ಈಗಾಗಲೇ ಈ ರೈಲು ಮಾರ್ಗ ವಿದ್ಯುದ್ದೀಕರಣಗೊಂಡಿದೆ, ಗಿಡಗಂಟಿಗಳ ಬೆಂಕಿಯ ತಾಪ ವಿದ್ಯುತ್ ತಂತಿಗಳಿಗೆ ತಾಗಿ ಅನಾಹುತವಾದರೆ ಯಾರು ಜವಾಬ್ದಾರರು ? ಎಂದು ಅವರು ಪ್ರಶ್ನಿಸಿದ್ದಾರೆ.

ಈ ಸಂದರ್ಭದಲ್ಲಿ ವಿಶ್ವ ಕರವೇ ಹರಿಹರ ತಾಲ್ಲೂಕು ಘಟಕದ ಅಧ್ಯಕ್ಷ ರಾಹುಲ್ ಮೆಹರ್ವಾಡೆ, ಪದಾಧಿಕಾರಿಗಳಾದ ವೃಷಭ್ ಮತ್ತು ಹರೀಶ್ ಇದ್ದರು.

# ಚುನಾವಣೆಗೆ ಸನ್ನದ್ಧರಾದ ಅಧಿಕಾರಿಗಳು

**(1ನೇ ಪುಟದಿಂದ)** ಅನುಮತಿ ಇಲ್ಲದೇ ಕರಪತ್ರ ಹಂಚಿಕೆ, ಮಾದರಿ ನೀತಿ ಸಂಹಿತೆ ಉಲ್ಲಂಘನೆ, ಹಣ, ಮದ್ಯ ಹಂಚಿಕೆ, ಉಡುಗೊರೆಗಳ ಹಂಚಿಕೆ ಕುರಿತಂತೆ ನೀತಿ ಸಂಹಿತೆ ಉಲ್ಲಂಘನೆ ಕುರಿತಂತೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ, ಕಾಯಿದೆ, ಸೆಕ್ಷನ್‌ಗಳ ಬಗ್ಗೆ ಎಲ್ಲಾ ತಂಡಗಳಿಗೆ ತರಬೇತಿ ನೀಡಲಾಯಿತು.

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಮಾತನಾಡಿ, ಚುನಾವಣಾ ಆಯೋಗದ ನಿರ್ದೇಶನದಂತೆ ಚುನಾವಣೆಯನ್ನು ಪಾರದರ್ಶಕ, ನ್ಯಾಯ ಸಮ್ಮತ, ನಿಷ್ಪಕ್ಷಪಾತವಾಗಿ ನಡೆಸಲು ಎಲ್ಲಾ ಸಿಬ್ಬಂದಿಗಳು ಭಾಗವಹಿಸುವಿಕೆ ಯೊಂದಿಗೆ ಚುನಾವಣಾ ಕರ್ತವ್ಯ ನಿರ್ವಹಿಸಬೇಕು. ಚುನಾವಣಾ ಸಂದ ರ್ಭದಲ್ಲಿ ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲನೆ, ಅನುಷ್ಠಾನ ಮಾಡುವ ಮೂಲಕ ಪಾರದರ್ಶಕ ಚುನಾವಣೆ ನಡೆಸಲು ಸಂಘಟಿತರಾಗಿ ಕೆಲಸ ಮಾಡಬೇಕೆಂದರು.

ಚುನಾವಣಾ ಕರ್ತವ್ಯವನ್ನು ಬಹಳ ಜ ವಾ ಬ್ದಾ ರಿ ಯು ತ ವಾ ಗಿ ನಿರ್ವಹಿಸಬೇಕು, ಯಾವುದೇ ನಿರ್ಲಕ್ಷ್ಯತೆ ಸಲ್ಲದು, ಚುನಾವಣಾ ಸಂದರ್ಭದಲ್ಲಿ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳನ್ನು ಸರಿಯಾಗಿ ದಾಖಲು ಮಾಡುವ ಮೂಲಕ ಅದಕ್ಕೆ ಪೂರಕವಾದ ಸಾಕ್ಷ್ಯಗಳ ಕ್ರೋಢೀಕರಣ ಮಾಡಿಕೊಳ್ಳಬೇಕೆಂದರು.

ತರಬೇತಿಯಲ್ಲಿ ಜಿಲ್ಲಾ ಪಂಚಾ ಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಮಾದರಿ ನೀತಿ ಸಂಹಿತೆ ನೋಡಲ್ ಅಧಿಕಾರಿ ಸುರೇಶ್ ಇಟ್ನಾಳ್, ಅಪರ ಜಿಲ್ಲಾಧಿಕಾರಿ ಸೈಯ್ಯದ್ ಅಫ್ರೀನ್ ಭಾನು ಎಸ್.ಬಳ್ಳಾರಿ, ತರಬೇತುದಾರರಾದ ಅರವಿಂದ್ ಐರಣಿ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

# ಇಟ್ಟಿಗುಡಿ ; ವಾಮಾಚಾರಗಳ ಕಾಟ: ಆತಂಕದಲ್ಲಿ ಜನತೆ




ಹರಪನಹಳ್ಳಿ, ಫೆ. 22 - ಇಂದಿನ ವೈಜ್ಞಾನಿಕ ಯುಗದಲ್ಲೂ ವಾಮಾಚಾರವೆಂದರೆ ಜನರು ಬೆಚ್ಚಿ ಬೀಳುವುದರ ಜತೆಗೆ ತೀವ್ರ ಆತಂಕ ಪಡುತ್ತಿದ್ದಾರೆ.

ತಾಲ್ಲೂಕು ಇಟ್ಟಿಗುಡಿ ಗ್ರಾಮ ದಲ್ಲಿ ಮಂಗಳವಾರ ರಾತ್ರಿ ಯಾರೋ ಅನಾಮಿಕರಿಂದ ವಾಮಾಚಾರ ನಡೆಯುತ್ತಿದ್ದು, ಮಧ್ಯರಾತ್ರಿ ಅಥವಾ ಜನಸಂದಣಿ ಇಲ್ಲದ ಸಂದರ್ಭದಲ್ಲಿ ಯಾರೋ ಈ ಕೆಲಸ ಮಾಡುತ್ತಿರುವುದರಿಂದ ಜನರು ಆತಂಕಗೊಂಡು, ಪೊಲೀಸ್ ಠಾಣೆಗಾದರೂ ದೂರು ಸಲ್ಲಿಸಿ ಇದಕ್ಕೆ ಕಡಿವಾಣ ಹಾಕೋಣವೇ ಎಂದು ಗ್ರಾಮದ ಯುವಕರು, ಮುಖಂಡರು ಚರ್ಚೆಯಲ್ಲಿ ತೊಡಗಿದ್ದಾರೆ. 500 ಮನೆಗಳಿರುವ ಇಟ್ಟಿಗುಡಿ ಗ್ರಾಮದಲ್ಲಿ ಸಾವಿರಾರು ಜನ ಸಂಖ್ಯೆಯನ್ನು ಹೊಂದಿದ್ದು, ರೈತರ ಜಮೀನುಗಳಿಗೆ ಮತ್ತು ಸಾರ್ವಜನಿಕರು ಸಂಚರಿಸುವ ರಸ್ತೆಗಳು ಇವೆ. ಆ ರಸ್ತೆ ಮಧ್ಯದಲ್ಲೇ ಯಾರೋ ಕಿಡಿಗೇಡಿಗಳು ವಾಮಾಚಾರ ಮಾಡಿದ್ದಾರೆ.

ವಾಮಾಚಾರ ಕಾರ್ಯದಲ್ಲಿ ಹಂದಿ ಮಾಂಸ, ವಿಚಿತ್ರ ಗೊಂಬೆಗೆ ತಲೆಗೂದಲು, ಮೈಮೇಲೆ ಸೂಜಿ, ಭಯಂಕರವಾದ ಹಲ್ಲು, ಗೊಂಬೆಗೆ ಹೂವಿನ ಅಲಂಕಾರ ಮಾಡಲಾಗಿದ್ದು, ರಂಗೋಲಿ ಹಾಕಿ ಹಸಿರು, ಬಿಳಿ ಬಟ್ಟೆಯ ಮೇಲೆ ಕೂಡ್ರಿಸಿ ಹಣ್ಣು ಹಂಪಲಗಳನ್ನು ಬಳಸಿ ಪೂಜೆ ಸಲ್ಲಿಸಲಾಗಿದೆ. ಇದರಿಂದ ಇಟ್ಟಿಗುಡಿ ಗ್ರಾಮಸ್ಥರು ಮತ್ತು ಸುತ್ತಮುತ್ತಲಿನ ಗ್ರಾಮಸ್ಥರು ಆತಂಕ ಪಡುವಂತಾಗಿದೆ.

KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಜ್ಞಾನದ ದಾಹ ನೀಗಿಸುವ ತರಳಬಾಳು ಹುಣ್ಣಿಮೆ




**(ಈ ಬಾರಿ ಭೀಕರ ಬರಗಾಲದ ಪ್ರಯುಕ್ತ ಸಿರಿಗೆರೆಯಲ್ಲಿಯೇ ಸರಳವಾದ ಅರ್ಥಪೂರ್ಣ ಕಾರ್ಯಕ್ರಮ)**

ಆಚರಣೆಯ ಹಿನ್ನೆಲೆ : ಹನ್ನೆರಡನೇ ಶತಮಾನದಲ್ಲಿ ಕಂದಾಚಾರ, ಮೂಢನಂಬಿಕೆ, ಪ್ರಾಣಿ ಬಲಿಯಂತಹ ಅನಿಷ್ಟ ಪದ್ದತಿಗಳ ವಿರುದ್ದ ಹೋರಾಡಿ ಸಮತೆಯ ತತ್ವವನ್ನು ಸಮಾನತೆಯ ಸಂಕೇತವನ್ನಾಗಿಸಿ, ಮೊದಲ ದಿಟ್ಟ ಹೆಜ್ಜೆ ಇಟ್ಟ ಪವಾಡ ವಿರೋಧಿ ಮಹಿಮಾ ಪುರುಷ ರೆಂದರೆ ಬಸವಣ್ಣನ ಸಮಕಾಲೀನರಾದ ವಿಶ್ವಬಂಧು ಮರುಳಸಿದ್ದರು.

ತನ್ನ ನಂತರವೂ ತಮ್ಮ ಸಿದ್ಧಾಂತ ಮತ್ತು ಆದರ್ಶಗಳು ಲೋಕದ ತರಳರ ಬಾಳಿಗೆ ಬೆಳಕಾಗಬೇಕು ಎಂಬ ಮಹಾನ್ ಸಂಕಲ್ಪದೊಂದಿಗೆ

ಮಾಘ ಮಾಸದ ಭರತ ಪೌರ್ಣಿಮೆಯ ದಿನದಂದು ಶ್ರೀ ತರಳಬಾಳು ಜಗದ್ಗುರು ಗುರು ಪರಂಪರೆಯ ಮೂಲ ಪುರುಷರಾದ ಶ್ರೀ ವಿಶ್ವಬಂಧು ಮರುಳಸಿದ್ದರು ಸದ್ಧರ್ಮ ಸಿಂಹಾಸನದ ಪೀಠವನ್ನು ಸ್ಥಾಪಿಸಿ , ತಮ್ಮ ಶಿಷ್ಯರಾದ ತೆಲಗುಬಾಳು ಮೂಕ ಸಿದ್ದರನ್ನು ಮಾತನಾಡುವ ಸಿದ್ದರನ್ನಾಗಿಸಿ ಶ್ರೀ ಪೀಠದ ಮೇಲೆ ಕೂರಿಸಿ ಸಮಾಜದ ಹಿತಕಾಯುವ ಸದಾಶಯದ ಉತ್ತರೋತ್ತರ ಉತ್ಕೃಷ್ಟ ಶಿಷ್ಯ ಸಮಾಜವನ್ನು ನಿರ್ಮಾಣ ಮಾಡುವಂತೆ ತರಳ ಬಾಳು ಎಂದು ಆಶೀರ್ವದಿಸಿದರು.

ಈ ತರಳಬಾಳು ಎಂಬ ಪಂಚಾಕ್ಷರಿ ಮಂತ್ರದಲ್ಲಿ ಸಂಪೂರ್ಣ ಮಾನವ ಕುಲದ ಅಭ್ಯುದಯವೇ ಅಡಗಿದೆ. ಈ ಚಾರಿತ್ರ್ಯಕ ಅಮೃತ ಗಳಿಗೆಯ ನೆನಪನ್ನು ಗುರು-ಶಿಷ್ಯರ ಭಕ್ತಿ ಭಾವಮಿಲನದ ಸಾಕ್ಷಾತ್ಕಾರದ ಮೂಲಕ ಜ್ಞಾನ ದಾಸೋಹದ ಕಾರ್ಯ ಕ್ರಮವನ್ನಾಗಿಸಿ ತರಳಬಾಳು ಹುಣ್ಣಿಮೆಯ ನ್ನಾಗಿಸಿದ ಕೀರ್ತಿ ದಿಟ್ಟ ಹೆಜ್ಜೆಯ ಧೀರ ಪ್ರಭು ಲಿಂಗೈಕ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮೀಜಿಯವರಿಗೆ ಸಲ್ಲುತ್ತದೆ.

ಸಮಾಜದ ಸಮಸ್ಯೆಗಳಿಗೆ ಸ್ಪಂದಿಸಿ, ಜನಮುಖಿ ಕಾರ್ಯಕ್ರಮವನ್ನಾಗಿಸಿ, ಆಧುನಿಕ ಲೇಪನದೊಂದಿಗೆ, ಜನರ ಧ್ವನಿಗೆ ಬಲ ನೀಡಿ, ಜಾತಿ,ಧರ್ಮ,ಪ್ರದೇಶದ ಭೇದವರಿಯದೆ ಸಕಲ ಜೀವಾತ್ಮರಿಗೂ ಲೇಸನ್ನೇ ಬಯಸುವ ಆದರ್ಶ ಹೊಂದಿ ನಾಡಿನ ಎಲ್ಲಾ ಧಾರ್ಮಿಕ ಸಮಾರಂಭಗಳಿಗೆ ಮಾತೃ ಸ್ವರೂಪದಂತೆ ತರಳಬಾಳು ಹುಣ್ಣಿಮೆಯನ್ನು ಅತ್ಯುನ್ನತ ಅರ್ಥಪೂರ್ಣ ಸಮಾರಂಭವನ್ನಾಗಿಸಿ ದೇಶ- ವಿದೇಶಗಳಿಗೆ ಹುಣ್ಣಿಮೆಯ ಸಾರ್ಥಕ ಸಂದೇಶಗಳನ್ನು ಹರಡಿಸಿದವರು ಈಗಿನ ಗುರುವರ್ಯರಾದ ಆಧುನಿಕ ಭಗೀರಥ ಎಂದೇ ಪ್ರಸಿದ್ದಿ ಪಡೆದಿರುವ, ವಿಶ್ವ ಪೂಜನೀಯ ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಯವರು.

**ಬರಗಾಲದ ಪ್ರಯುಕ್ತ ಸರಳ ಕಾರ್ಯಕ್ರಮ**

ಕಳೆದ ಏಳು ದಶಕಗಳಿಂದಲೂ ನಾಡಿನ ಒಳ ಹೊರಗೆ ಪ್ರತಿ ವರ್ಷವೂ ಜನ ಜೀವನದ ಮಾನವೀಯತೆಗೆ ಮಿಡಿಯುತ್ತಿ ರುವ, ಸರ್ವಜನಾಂಗದ ಮೆಚ್ಚುಗೆಗೆ ಪಾತ್ರವಾಗಿರುವ ಸಾಂಸ್ಕೃತಿಕ ಹಾಗೂ ಭಾವೈಕ್ಯತೆಯ ಹಬ್ಬವೆನಿಸಿರುವ ತರಳಬಾಳು ಹುಣ್ಣಿಮೆಯು ನಾಡಹಬ್ಬವಾಗಿ ಜನಮನ್ನಣೆ ಗಳಿಸಿರುವುದು ಜಗಜ್ಜಾಹಿರ. ಜನಮುಖಿಯ ಜಾಗತಿಕ ಹಬ್ಬವಾಗಿ ಹೆಗ್ಗಳಿಕೆ ಹೊಂದಿರುವ ಈ ಮಹೋತ್ಸವವು ಸಂಪ್ರದಾಯದಂತೆ ಒಂಭತ್ತು ದಿನಗಳ ಕಾಲ ನಡೆಯಬೇಕಿತ್ತು. ಈ ವರ್ಷ ನಾಡಿನಲ್ಲಿ ತೋರಿರುವ ಭೀಕರ ಬರಗಾಲದ ಪ್ರಯುಕ್ತ ಸರಳವಾಗಿ ಸಿರಿಗೆರೆಯಲ್ಲಿಯೇ ಅರ್ಥಪೂರ್ಣ ಕಾರ್ಯಕ್ರಮಗಳೊಂದಿಗೆ ಫೆಬ್ರವರಿ 22 ರಿಂದ 24 ರವರೆಗೆ ಮೂರು ದಿನಗಳ ಕಾಲ ಪರಮಪೂಜನೀಯ ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಯವರ ಪಾವನ ಸನ್ನಿಧಿಯಲ್ಲಿ ಜರುಗಲಿದೆ.

**ಅಡ್ಡಪಲ್ಲಕ್ಕಿ ಉತ್ಸವ ಇಲ್ಲ**

1950 ರಿಂದ ಆರಂಭವಾಗಿರುವ ತರಳ ಬಾಳು ಹುಣ್ಣಿಮೆಯ ಪ್ರಮುಖ ಆಕರ್ಷಣೀ ಯವಾಗಿದ್ದ ಅಡ್ಡಪಲ್ಲಕ್ಕಿ ಉತ್ಸವವನ್ನು ಈ ಬಾರಿ ಆಚರಿಸದಂತೆ ಭಕ್ತರಿಗೆ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ಸೂಚನೆ ನೀಡಿದ್ದಾರೆ.

**ಈ ಬಾರಿಯ ವಿಶೇಷ**

ಹುಣ್ಣಿಮೆಯ ವಿಶೇಷವಾಗಿ ಇದೇ ಪ್ರಥಮವಾಗಿ 18 ರಿಂದ 40 ವರ್ಷ ದೊಳಗಿನ ಸರ್ವ ವರ್ಗದ ಯುವಕರಿಗಾಗಿ ಗ್ರಾಮೀಣ ಕ್ರೀಡಾಕೂಟಗಳ ಆಯೋಜನೆ, ಶ್ರೀ ಸಂಸ್ಥೆಯ 150 ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ವಿದ್ಯಾರ್ಥಿಗಳಿಂದ ವಿಜ್ಞಾನ ವಸ್ತು ಪ್ರದರ್ಶನ, ಮಹಿಳಾ ಚಿಂತನ ಗೋಷ್ಠಿ, ವಿಜ್ಞಾನಿಗಳ ಜೊತೆ ಸಂವಾದ, ಸಾಧಕರಿಗೆ ಸನ್ಮಾನ, ಚಿಂತಕರ ಉಪನ್ಯಾಸಗಳ ಜೊತೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತವೆ.

ಸಂಕುಚಿತ ಬುದ್ಧಿಯ ಮೂಲಭೂತವಾದಿಗಳ ಕೀಳುತನದಿಂದಾಗಿ ವಿವಿಧ ಧರ್ಮಗಳ ಮಧ್ಯೆ ಸಂಶಯದ ಅಡ್ಡಗೋಡೆಗಳು ನಿರ್ಮಾಣವಾಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಜಾತಿ-ಮತ, ಪ್ರಾಂತ್ಯ-ಪ್ರದೇಶಗಳ ಭೇದವಿಲ್ಲದೆ ಎಲ್ಲರನ್ನೂ ಸದ್ಧರ್ಮದ ಬೆಸುಗೆಯಲ್ಲಿ ಒಗ್ಗೂಡಿಸುವ ಭಾವೈಕ್ಯ ಸಂಗಮವಾದ ಈ ಉತ್ಸವವು ನಾಡಿಗೆ ಅಷ್ಟೇ ಅಲ್ಲ, ದೇಶಕ್ಕೆ ಮಾದರಿಯಾದ ಕಾರ್ಯಕ್ರಮವಾಗಿದೆ.

ಈ ರೀತಿ ಹುಣ್ಣಿಮೆಯ ಕಾರ್ಯಕ್ರಮವು ಕೇವಲ ಜಾತ್ರೆಯಾಗದೆ ನೆಲ, ಜಲ, ಧರ್ಮ, ಸಾಹಿತ್ಯ, ಕಲೆ,ಸಂಸ್ಕೃತಿಗಳ ಸಂಗಮವಾಗಿ ನಾಡಿನ ಸಾಂಸ್ಕೃತಿಕ, ಭಾವೈಕ್ಯತೆಯ ಹಬ್ಬ ವಾಗಿ ನೊಂದವರ ಬೆಂದವರ ಆಶಾಕಿರಣವಾಗಿದೆ.

**- ಎಲ್.ಜಿ. ಮಧುಕುಮಾರ್,**
ಬಸವಾಪಟ್ಟಣ,
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು
ಚನ್ನಗಿರಿ

# ಕೇರಳ ಮಾದರಿಯಲ್ಲಿ ಅನಿವಾಸಿ ಭಾರತೀಯರ ಸಚಿವಾಲಯ



ಬೆಂಗಳೂರು, ಫೆ. 22 - ಕೇರಳ ಮಾದರಿಯಲ್ಲಿ ಅನಿವಾಸಿ ಭಾರತೀಯರ ಸಚಿವಾಲಯ ತೆರೆಯುವುದಾಗಿ ಗೃಹ ಸಚಿವ ಜಿ.ಪರಮೇಶ್ವರ್ ವಿಧಾನಸಭೆಗೆ ಭರವಸೆ ನೀಡಿದರು.

ಸಭಾಧ್ಯಕ್ಷರ ಗ್ಯಾಲರಿಯಲ್ಲಿ ಅನಿವಾಸಿ ಭಾರತೀಯರ ಸಮಿತಿ ಉಪಾಧ್ಯಕ್ಷರಾದ ಆರತಿ ಕೃಷ್ಣ ನೇತೃತ್ವದಲ್ಲಿ 15ಕ್ಕೂ ಹೆಚ್ಚು ವಿವಿಧ ರಾಷ್ಟ್ರಗಳ ಅನಿವಾಸಿ ಭಾರತೀಯರು ಸದನದ ಕಲಾಪಗಳನ್ನು ವೀಕ್ಷಿಸುತ್ತಿರುವ ವಿಚಾರವನ್ನು ಸದನದ ಗಮನಕ್ಕೆ ತಂದು, ಎಲ್ಲ ಶಾಸಕರು ಹಾಗೂ ಸರ್ಕಾರದ ಪರವಾಗಿ ಅತಿಥಿಗಳನ್ನು ಸ್ವಾಗತಿಸುವುದಾಗಿ ತಿಳಿಸಿದರು.

ವಿಧಾನಸಭಾ ಚುನಾವಣೆ ಪೂರ್ವದಲ್ಲಿ ಪ್ರಣಾಳಿಕೆ ಸಿದ್ಧಪಡಿಸುವಾಗ ಪ್ರತ್ಯೇಕ ಸಚಿವಾಲಯ ಬೇಡಿಕೆಯನ್ನು ಅನಿವಾಸಿ ಭಾರತೀಯರು ಇಟ್ಟಿದ್ದರು. ಅದರಂತೆ ಪ್ರಣಾಳಿಕೆಯಲ್ಲೂ ವಿಚಾರವನ್ನು ಸೇರಿಸಿದ್ದೆವು, ಮುಂದಿನ ದಿನಗಳಲ್ಲಿ ಪ್ರತ್ಯೇಕ ಸಚಿವಾಲಯ ಮಾಡುತ್ತೇವೆ ಎಂದರು. ಕಾನೂನಾತ್ಮಕ ವಾಗಿ ಅವರಿಗೆ ಅಗತ್ಯವಿರುವ ಸಹಾಯ ಮಾಡುತ್ತೇವೆ, ಕಲ್ಯಾಣ ಕೆಲಸಗಳನ್ನು ಮಾಡುತ್ತೇವೆ, ಕೆನಡಾ, ಯುಕೆ, ಆಸ್ಟ್ರೇಲಿಯಾ, ಅಮೆರಿಕ ಸೇರಿದಂತೆ ವಿವಿಧ ರಾಷ್ಟ್ರಗಳ ಅನಿವಾಸಿ ಭಾರತೀಯರು ಸದನದ ಕಲಾಪ ವೀಕ್ಷಿಸುತ್ತಿದ್ದಾರೆ. ಅವರನ್ನು ಸ್ವಾಗತಿಸುವುದಾಗಿ ತಿಳಿಸಿದರು.

ಅನಿವಾಸಿ ಭಾರತೀಯರು ಬೇರೆ ಬೇರೆ ದೇಶಗಳಲ್ಲಿ ಉದ್ಯೋಗ ಕಟ್ಟಿಕೊಂಡಿದ್ದಾರೆ, ಅನೇಕರು ಉದ್ಯಮಿಗಳಾಗಿ ಯಶಸ್ವಿಯಾಗಿದ್ದಾರೆ.

ಶೇ.60ರಿಂದ 80ರಷ್ಟು ಮಂದಿ ಹೊರ ರಾಷ್ಟ್ರದಲ್ಲಿ ಗಳಿಸಿದ ಆದಾಯವನ್ನು ಭಾರತಕ್ಕೆ ಮರಳಿ ತರುವ ಮನಸ್ಸು ಮಾಡಿದ್ದಾರೆ. ಅನಿವಾಸಿ ಭಾರತೀಯರು ಗಳಿಸಿದ ಆದಾಯದ ಒಂದು ಪಾಲನ್ನು ನಮ್ಮ ಸಮಾಜದ ಅಭಿವೃದ್ಧಿಗೆ ಕೊಡುಗೆ ಯಾಗಿ ನೀಡುತ್ತಿದ್ದಾರೆ. ರಾಜ್ಯ ಮತ್ತು ರಾಷ್ಟ್ರದ ಅಭಿವೃದ್ಧಿಯಲ್ಲಿ ಪರೋಕ್ಷವಾಗಿ ಕೊಡುಗೆ ನೀಡುತ್ತಿದ್ದಾರೆ ಎಂದರು.

# ಆಲ್ ಇಂಡಿಯಾ ಇಂಟರ್ ಯೂನಿವರ್ಸಿಟಿ ಜ್ಯೂಡೋ ಸ್ಪರ್ಧೆಗೆ ಮಮತಾ ಆಯ್ಕೆ



ದಾವಣಗೆರೆ, ಫೆ. 22- ದಾವಣಗೆರೆ ವಿಶ್ವವಿದ್ಯಾನಿಲಯದ ವೇಟ್ ಲಿಫ್ಟಿಂಗ್, ಪವರ್ ಲಿಫ್ಟಿಂಗ್ ಜ್ಯೂಡೋ ಸ್ಪರ್ಧೆಯಲ್ಲಿ ನಗರದ ಎಸ್‌ಬಿಸಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಎಂ.ಕಾಂ. ವಿದ್ಯಾರ್ಥಿನಿ ಕು. ಎಲ್. ಮಮತಾ ಪ್ರಥಮ ಸ್ಥಾನ ದೊಂದಿಗೆ ಬಂಗಾರದ ಪದಕ ಪಡೆದಿದ್ದಾರೆ.

ಪಂಜಾಬಿನ ಅಮೃತಸರದಲ್ಲಿ ಕಳೆದ ವಾರ ನಡೆದ ಆಲ್ ಇಂಡಿಯಾ ಇಂಟರ್ ಯೂನಿವರ್ಸಿಟಿ ಜ್ಯೂಡೋ ಸ್ಪರ್ಧೆಗೆ ಮಮತಾ ಆಯ್ಕೆಯಾಗಿದ್ದಾರೆ.

ಮಮತಾ ಅವರಿಗೆ ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್‌ನ ಅಥಣಿ ಸ್ನಾತಕೋತ್ತರ ಕೇಂದ್ರದ ಅಧ್ಯಕ್ಷರು ಹಾಗೂ ಮ್ಯಾನೇಜಿಂಗ್ ಟ್ರಸ್ಟಿ ಡಾ. ಅಥಣಿ ವೀರಣ್ಣ, ಎಸ್‌ಬಿಸಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಅಧ್ಯಕ್ಷ ಬಿ.ಸಿ. ಉಮಾಪತಿ, ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಎನ್.ಎ. ಮುರುಗೇಶ್, ಎಸ್‌ಬಿಸಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಕೆ. ಷಣ್ಮುಖ, ಅಥಣಿ ಸ್ನಾತಕೋತ್ತರ ಕೇಂದ್ರ, ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ ಸದಸ್ಯರು, ಆಡಳಿತ ಮಂಡಳಿಯವರು, ಪ್ರಾಂಶುಪಾಲರು ಹಾಗೂ ಉಪನ್ಯಾಸಕರು, ವಿದ್ಯಾರ್ಥಿಗಳು, ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

# 26ರಂದು ಉದ್ಯೋಗ ಮೇಳ

ಬೆಂಗಳೂರು, ಫೆ. 22 - ಪದವಿ, ಇಂಜಿನಿಯರಿಂಗ್, ಡಿಪ್ಲೋಮಾ ಹಾಗೂ ಇನ್ನಿತರೆ ವೃತ್ತಿಪರ ಕೋರ್ಸ್‌ಗಳನ್ನು ಪೂರ್ಣಗೊಳಿಸಿದವರಿಗೆ ಉದ್ಯೋಗಾವಕಾಶ ಕಲ್ಪಿಸುವ ಬೃಹತ್ ಯುವ ಸಮೃದ್ಧಿ ಸಮ್ಮೇಳನ ಇದೇ ದಿನಾಂಕ 26 ಮತ್ತು 27ರಂದು ನಗರದ ಅರಮನೆ ಮೈದಾನದಲ್ಲಿ ನಡೆಯಲಿದೆ.

ಜಂಟಿ ಸುದ್ದಿಗೋಷ್ಠಿಯಲ್ಲಿಂದು ಈ ವಿಷಯ ತಿಳಿಸಿದ ಸಚಿವ ಶರಣ ಪ್ರಕಾಶ್ ಪಾಟೀಲ್ ಹಾಗೂ ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಕೌಶಲ್ಯಾಭಿವೃದ್ಧಿ ಹಾಗೂ ಜೀವನೋಪಾಯ ಇಲಾಖೆ ಸಹಭಾಗಿತ್ವದಲ್ಲಿ ಯುವ ಸಮೃದ್ಧಿ ಸಮ್ಮೇಳನ ಆಯೋಜಿಸಲಾಗಿದೆ ಎಂದು ಹೇಳಿದರು.

ರಾಜ್ಯಾದ್ಯಂತ 31 ಸಾವಿರ ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಹೆಸರು ನೋಂದಣಿ ಮಾಡಿಕೊಂಡಿದ್ದಾರೆ ಎಂದರು. ಉದ್ಯೋಗ ಮೇಳದಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಹೆಸರಾಂತ 500ಕ್ಕೂ ಹೆಚ್ಚು ಕಂಪನಿಗಳು ಪಾಲ್ಗೊಳ್ಳಲಿವೆ. ಅಂದಾಜು ಒಂದು ಲಕ್ಷ ಹುದ್ದೆಗಳು ಲಭ್ಯವಿದ್ದು, ಶೈಕ್ಷಣಿಕ ಅರ್ಹತೆಗೆ ತಕ್ಕಂತೆ ಉದ್ಯೋಗ ಒದಗಿಸಲು ಇದು ವೇದಿಕೆಯಾಗಲಿದೆ ಎಂದರು.

ಉದ್ಯೋಗ ಮೇಳದಲ್ಲಿ 600ಕ್ಕೂ ಹೆಚ್ಚು ಸ್ಟಾಲ್‌ಗಳನ್ನು ಹಾಕಲಾಗಿದೆ, ಅಭ್ಯರ್ಥಿಗಳು ಪ್ರತಿಯೊಂದು ಸ್ಟಾಲ್‌ಗೂ ಭೇಟಿ ನೀಡಿ, ತಮ್ಮ ಶೈಕ್ಷಣಿಕ ಅರ್ಹತೆಗೆ ಅನುಗುಣವಾಗಿ ಎಲ್ಲಿ, ಯಾವ ಹುದ್ದೆಗಳು ಖಾಲಿ ಇವೆ ಎಂಬ ಮಾಹಿತಿ ಪಡೆಯಬಹುದಾಗಿದೆ. ಉದ್ಯೋಗ ಅರಸಿ ಬರುವವರಿಗೆ ಆಯಾ ಕಂಪನಿಗಳ ನುರಿತ ತಜ್ಞರು, ಪರಿಣಿತರು ಸಂಪೂರ್ಣ ಮಾಹಿತಿ ನೀಡಲಿದ್ದಾರೆ ಎಂದರು.

ಉದ್ಯೋಗ ಮೇಳದಲ್ಲಿ ಕೆಲಸ ಸಿಗದವರಿಗೆ ತರಬೇತಿ ನೀಡುವ ಉದ್ದೇಶ ಹೊಂದಿದ್ದು, ತರಬೇತಿ ನಂತರ ಮುಂದಿನ ದಿನಗಳಲ್ಲಿ ಉದ್ಯೋಗ ಪಡೆಯಬಹುದಾಗಿದೆ.

ಯುವ ಸಮೃದ್ಧಿ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟಿಸಲಿದ್ದು, ಸಮ್ಮೇಳನಕ್ಕೆ ಬರುವವರಿಗೆ ಉಚಿತ ಊಟದ ವ್ಯವಸ್ಥೆ ಹಾಗೂ ಮೆಜೆಸ್ಟಿಕ್‌ನ ರೈಲ್ವೆ ಹಾಗೂ ಬಸ್ ನಿಲ್ದಾಣಗಳಿಂದ ಮತ್ತು ಶಾಂತಿನಗರ ಬಸ್ ನಿಲ್ದಾಣದಿಂದ ಉಚಿತ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಅವರು ವಿವರಿಸಿದರು.

# ಉಕ್ರೇನ್‌ನಲ್ಲಿ ಸೈನಿಕರ ಕೊರತೆ : ಸೈನ್ಯ ಸೇರ್ಪಡೆಗಾಗಿ ಬಲವಂತದ ಕ್ರಮಗಳ ಬಗ್ಗೆ ಆಕ್ಷೇಪ

ಲೈಮ್ಯಾನ್, ಫೆ. 22 – ಉಕ್ರೇನ್ ಸಮರ ಎರಡು ವರ್ಷ ಪೂರೈಸುತ್ತಿರುವಂತೆಯೇ, ಸೈನಿಕರ ತೀವ್ರ ಕೊರತೆ ಎದುರಾಗುತ್ತಿದೆ. ಹೊಸದಾಗಿ ಸೈನ್ಯಕ್ಕೆ ಸೇರ್ಪಡೆಯಾಗಲು ಯುವಕರಲ್ಲಿ ಉತ್ಸಾಹ ಕಂಡು ಬರುತ್ತಿಲ್ಲ. ಈಗಿರುವ ಸೈನಿಕರು ವಿಶ್ರಾಂತಿಯಿಲ್ಲದೇ ಬಳಲುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಸೈನ್ಯಕ್ಕೆ ಸೇರ್ಪಡೆ ಮಾಡುವವರ ಸಂಖ್ಯೆ ಹೆಚ್ಚಿಸಲು ಉಕ್ರೇನ್ ಕರಡು ಮಸೂದೆ ರೂಪಿಸಿದೆ. ಸೈನ್ಯಕ್ಕೆ ಕಡ್ಡಾಯ ಸೇರ್ಪಡೆಯಾಗುವ ವಯಸ್ಸನ್ನು 27ರಿಂದ 25ಕ್ಕೆ ಇಳಿಸುವುದೂ ಸೇರಿದಂತೆ ಹಲವು ಪ್ರಸ್ತಾಪಗಳು ಇದರಲ್ಲಿವೆ. ಆದರೆ, ಈ ಮಸೂದೆ ಉಕ್ರೇನ್ ಜನರಿಗೆ ಇಷ್ಟವಾಗುತ್ತಿಲ್ಲ.

ಪ್ರಸಕ್ತ ಮೂರು ಲಕ್ಷದಷ್ಟು ಉಕ್ರೇನ್ ಸೈನಿಕರಿದ್ದಾರೆ. ಇವರ ಸಂಖ್ಯೆಯನ್ನು ನಾಲ್ಕು ಲಕ್ಷಕ್ಕೆ ಹೆಚ್ಚಿಸಲು ಕರಡು ಮಸೂದೆ ರೂಪಿಸಲಾಗಿದೆ.

ಹೊಸ ಸೈನಿಕರು ಲಭ್ಯವಾಗದ ಕಾರಣ, ಈಗಾಗಲೇ ಸೈನ್ಯದಲ್ಲಿರುವವರಿಗೆ ಸಮರ್ಪಕ ವಿಶ್ರಾಂತಿ ದೊರೆಯುತ್ತಿಲ್ಲ. ಎರಡು ವರ್ಷಗಳ ಕಠಿಣ ಯುದ್ಧದಿಂದಾಗಿ ಸೈನಿಕರು ಗಾಯಗೊಂಡಿದ್ದಾರೆ, ಬಳಲಿದ್ದಾರೆ. ಹೊಸ ಸೈನಿಕರಿಗೂ ಸಮರ್ಪಕ ತರಬೇತಿ ಸಿಗುತ್ತಿಲ್ಲ.

ನಾವು ದಾಳಿ ನಡೆಸುವಷ್ಟು ಸೈನಿಕರನ್ನು ಹೊಂದಿಲ್ಲ. ರಷ್ಯಾದವರು ದಾಳಿ ನಡೆಸಿದರೆ ಅವರನ್ನು ಎದುರಿಸುವಷ್ಟು ಮಾತ್ರ ಬಲವಿದೆ ಎಂದು ಹಲವು ಕಮಾಂಡರ್‌ಗಳು ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ, ಸೈನಿಕರ ಸಂಖ್ಯೆ ಹೆಚ್ಚಿಸಲು ಸರ್ಕಾರ ಮುಂದಾಗಿದೆ. ಸೈನ್ಯ ಸೇರುವ ಅರ್ಹತೆ ಇದ್ದರೂ, ಸೇರದವರ ಬ್ಯಾಂಕ್ ಖಾತೆ ಸ್ಥಗಿತಗೊಳಿಸಲು ಹಾಗೂ ವಿದೇಶಕ್ಕೆ ತೆರಳದಂತೆ ತಡೆಯಲು ಕರಡು ಮಸೂದೆ ರೂಪಿಸಲಾಗಿದೆ. ಈ ರೀತಿ ಬಲವಂತವಾಗಿ ಸೈನ್ಯಕ್ಕೆ ಸೇರ್ಪಡೆ ಮಾಡಿಕೊಂಡರೂ, ಅದರಿಂದ ಪ್ರಯೋಜನವಾಗಲಿದೆಯೇ ? ಎಂಬ ಪ್ರಶ್ನೆಗಳನ್ನು ಹಲವರು ಕೇಳುತ್ತಿದ್ದಾರೆ.



# ಹೊನ್ನಾಳಿಯಲ್ಲಿ ವೈಭವದ ದಿಂಡಿ ಉತ್ಸವ

ಹೊನ್ನಾಳಿ, ಫೆ. 22- ಇಲ್ಲಿನ ದೊಡ್ಡಪೇಟೆ ಪಾಂಡುರಂಗ ದೇವರ 106 ನೇ ದಿಂಡಿ ಮಹೋತ್ಸವದ ಅಂಗವಾಗಿ ದ್ವಾದಶಿಯ ನಾಮದೇವ ಸಿಂಪಿ ಸಮಾಜದಿಂದ ನಗರದ ಮುಖ್ಯರಸ್ತೆಗಳಲ್ಲಿ ರಥೋತ್ಸವ ನಡೆಯಿತು. ದಶಮಿ, ಏಕಾದಶಿ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು. ಮೆರವಣಿಗೆಯಲ್ಲಿ ನಾಮದೇವ ಸಿಂಪಿ ದೈವ ಮಂಡಳಿ, ಭಜನಾ ಮಂಡಳಿ, ಸಾಂಸ್ಕೃತಿಕ ಸಂಘ, ರುಕ್ಮಿಣಿ ಮಹಿಳಾ ಮಂಡಳಿ, ಜ್ಞಾನೇಶ್ವರಿ ವಿದ್ಯಾನಿಧಿ ಯುವಕ ಮಂಡಳಿ ಅಧ್ಯಕ್ಷರು, ಪದಾಧಿಕಾರಿಗಳು ಸೇರಿದಂತೆ ಸಮಾಜದ ಸಂತರು, ಮುಖಂಡರು ಇದ್ದರು. ನಾಮದೇವ ಸಿಂಪಿ ಸಮಾಜದ ಅಧ್ಯಕ್ಷ ಶ್ರೀಹರಿ ಹೋವಳೆ, ಪ್ರೇಮನಾಥ್, ಕಾರ್ಯದರ್ಶಿ ಗಣಪತಿ, ನಾಮದೇವ, ಖಜಾಂಚಿ ಆನಂದರಾವ್, ಗಣೇಶ್, ಪಾಂಡುರಂಗ, ಗೋಪಾಲರಾವ್, ವಿನಯ್ ಸಖಾಫಿ ಸೇರಿದಂತೆ ಅನೇಕರಿದ್ದರು.

# ತಾಲಿಬಾನ್‌ನಿಂದ ಮರಣ ದಂಡನೆ ಶಿಕ್ಷೆ

ಘಜ್ನಿ, ಫೆ. 22 – ಆಫ್ಘಾನಿಸ್ತಾನದ ಕ್ರೀಡಾಂಗಣದಲ್ಲಿ ತಾಲಿಬಾನ್ ಇಬ್ಬರನ್ನು ಸಾರ್ವಜನಿಕವಾಗಿ ಮರಣ ದಂಡನೆಗೆ ಗುರಿಪಡಿಸಿದೆ. ಸಾವಿರಾರು ಜನರ ಎದುರಿಗೆ ಇಬ್ಬರನ್ನು ಗುಂಡಿಟ್ಟು ಹತ್ಯೆ ಮಾಡಲಾಗಿದೆ. ಈ ಇಬ್ಬರು ಪ್ರತ್ಯೇಕವಾಗಿ ಇಬ್ಬರನ್ನು ಹತ್ಯೆ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಮರಣ ದಂಡನೆ ವಿಧಿಸುವಂತೆ ತಾಲಿಬಾನ್‌ನ ಸುಪ್ರೀಂ ಕೋರ್ಟ್ ಆದೇಶಿಸಿತ್ತು. ಘಜ್ನಿ ನಗರದ ಅಲಿ ಲಾಲಾ ಕ್ರೀಡಾಂಗಣದಲ್ಲಿ ಸಾವಿರಾರು ಜನರ ಎದುರಿಗೆ ಮರಣ ದಂಡನೆ ನೆರವೇರಿಸಲಾಗಿದೆ.

# ರೈತ ಹೋರಾಟ : ಟ್ವಿಟ್ಟರ್ ಖಾತೆಗಳ ತಡೆಗೆ ಕಾಂಗ್ರೆಸ್ ತರಾಟೆ

ನವದೆಹಲಿ, ಫೆ. 22 – ರೈತ ಹೋರಾಟಗಳಿಗೆ ಸಂಬಂಧಿಸಿದ ಕೆಲ ಖಾತೆಗಳು ಹಾಗೂ ಪೋಸ್ಟ್‌ಗಳನ್ನು ತಡೆಯುವಂತೆ ಕೇಂದ್ರ ಸರ್ಕಾರ ಆದೇಶಿಸಿರುವುದಕ್ಕೆ ಟ್ವಿಟ್ಟರ್ ಆಕ್ಷೇಪಿಸಿರುವುದನ್ನು ಪ್ರಸ್ತಾಪಿಸಿರುವ ಕಾಂಗ್ರೆಸ್, ದೇಶದಲ್ಲಿ ಪ್ರಜಾಪ್ರಭುತ್ವದ ಹತ್ಯೆಯಾಗುತ್ತಿದೆ ಎಂದು ಆರೋಪಿಸಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಪ್ರಜಾಪ್ರಭುತ್ವದ ಹತ್ಯೆ ಮಾಡುತ್ತಿದ್ದಾರೆ. ಸಾರ್ವಜನಿಕರು ಇದಕ್ಕೆ ಉತ್ತರ ನೀಡಲಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ಭಾರತ ಸರ್ಕಾರ ಕೆಲ ಖಾತೆಗಳು ಹಾಗೂ ಪೋಸ್ಟ್‌ಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕಾರ್ಯಕಾರಿ ಆದೇಶ ಹೊರಡಿಸಿದೆ. ನಾವು ಈ ಖಾತೆಗಳನ್ನು ಭಾರತದಲ್ಲಷ್ಟೇ ತಡೆಯಲಿದ್ದೇವೆ. ಆದರೆ, ಈ ಕ್ರಮಗಳನ್ನು ನಾವು ಒಪ್ಪುವುದಿಲ್ಲ. ಈ ಖಾತೆಗಳಿಗೆ ಅಭಿವ್ಯಕ್ತಿ ಸ್ವಾತಂತ್ರ ಇರಬೇಕು ಎಂದು ಟ್ವಿಟ್ಟರ್ ಹೇಳಿತ್ತು.

# ಅಂಗವೈಕಲ್ಯ ಪತ್ತೆ : ದೇಶದ 14 ಕೇಂದ್ರಗಳಲ್ಲಿ ನಗರದ ಸಿ.ಆರ್.ಸಿ. ಸೇರ್ಪಡೆ

ದಾವಣಗೆರೆ, ಫೆ. 22 - ಆರಂಭಿಕ ಹಂತದಲ್ಲಿಯೇ ಮಕ್ಕಳಲ್ಲಿನ ಅಂಗವೈಕಲ್ಯವನ್ನು ಗುರುತಿಸಿ, ಸೂಕ್ತ ಕ್ರಮ ತೆಗೆದುಕೊಳ್ಳಲು ನಗರ ಸಮೀಪದ ವೊಡ್ಡಿನಹಳ್ಳಿಯಲ್ಲಿರುವ ಸಿ.ಆರ್.ಸಿ. (ಸಂಯುಕ್ತ ಪ್ರಾದೇಶಿಕ ಕೇಂದ್ರ)ಯಲ್ಲಿ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಕೇಂದ್ರದ ನೋಡಲ್ ಅಧಿಕಾರಿ ಗಣೇಶ್ ಶೇರೆಗಾರ್ ತಿಳಿಸಿದ್ದಾರೆ.

ಸಿ.ಆರ್.ಸಿ. ಕಟ್ಟಡ ಉದ್ಘಾಟನಾ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದೇಶದಲ್ಲಿ ಆರಂಭದಲ್ಲೇ ಅಂಗವೈಕಲ್ಯ ಪತ್ತೆ ಮಾಡುವ 14 ಕೇಂದ್ರಗಳಿವೆ. ಅವುಗಳಲ್ಲಿ ದಾವಣಗೆರೆ ಕೇಂದ್ರವೂ ಒಂದಾಗಿದೆ ಎಂದು ಹೇಳಿದರು.

ಅಂಗವೈಕಲ್ಯವನ್ನು ಹುಟ್ಟು ಮೊದಲಿನಿಂದ ಹಿಡಿದು ಆರು ವರ್ಷಗಳವರೆಗೆ ಗುರುತಿಸುವ ಹಾಗೂ ತಡೆಯುವ ವ್ಯವಸ್ಥೆಯನ್ನು ಇಲ್ಲಿ ಕಲ್ಪಿಸಲಾಗುತ್ತಿದೆ. ಇದಕ್ಕಾಗಿ ಆರು ಪರಿಣಿತರನ್ನು ನೇಮಿಸಲಾಗಿದೆ ಎಂದವರು ತಿಳಿಸಿದರು.

ಸಿ.ಆರ್.ಸಿ.ಯಲ್ಲಿ ಎರಡು ಡಿಪ್ಲೋಮಾ ತರಬೇತಿಗಳಿಗೆ ಚಾಲನೆ ನೀಡಲಾಗಿದೆ. ಶ್ರವಣ ಹಾಗೂ ಬೌದ್ಧಿಕ ದಿವ್ಯಾಂಗರಿಗೆ ವಿಶೇಷ ಶಿಕ್ಷಕರಾಗಲು ಈ ತರಬೇತಿ ನೀಡಲಾಗುವುದು ಎಂದವರು ಹೇಳಿದರು.

ಸಿ.ಆರ್.ಸಿ. ಕಟ್ಟಡವು ಸಾರ್ವತ್ರಿಕ ವಿನ್ಯಾಸ ಹಾಗೂ ಸಾರ್ವತ್ರಿಕ ಪ್ರವೇಶ ಹೊಂದಿದೆ. ಯಾವುದೇ ರೀತಿಯ ದಿವ್ಯಾಂಗರಾಗಿದ್ದರೂ ಅಡೆ ತಡೆಗಳಿಲ್ಲದೇ ಎಲ್ಲಿ ಬೇಕಾದರೂ ತೆರಳಲು ಅನುಕೂಲವಾಗುವ ರೀತಿಯಲ್ಲಿ ಕಟ್ಟಡ ರೂಪಿಸಲಾಗಿದೆ ಎಂದವರು ತಿಳಿಸಿದರು.

ಬೌದ್ಧಿಕ ಹಾಗೂ ದೈಹಿಕ ದಿವ್ಯಾಂಗ ಮಕ್ಕಳಿಗೆ ತರಬೇತಿ ನೀಡುವವರಿಗೆ ಅಗತ್ಯ ಪರಿಣಿತಿ ನೀಡಲು ಈ ಕೇಂದ್ರದಲ್ಲಿ ವ್ಯವಸ್ಥೆ ಮಾಡಲಾಗಿದೆ. ದಿವ್ಯಾಂಗರು ವೃತ್ತಿ ಜೀವನ ಕಂಡುಕೊಳ್ಳಲು ಸಾಧ್ಯವಾಗುವಂತಹ 36 ಕೌಶಲ್ಯಗಳನ್ನು ರೂಪಿಸಲಾಗಿದೆ. ದಿವ್ಯಾಂಗರು ಕನಿಷ್ಠ ವೇತನ ಪಡೆಯುವಂತೆ ಮಾಡಲು ಈ ಕೌಶಲ್ಯ ಕಲಿಸಲು ವ್ಯವಸ್ಥೆ ಮಾಡಲಾಗಿದೆ ಎಂದು ಶೇರಗಾರ್ ಹೇಳಿದರು.

ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲಿ ಆಟಿಸಂ ಸಮಸ್ಯೆ ಹೆಚ್ಚಾಗಿ ಕಂಡು ಬರುತ್ತಿದೆ. ಆಟಿಸಂ ಅಷ್ಟೇ ಅಲ್ಲದೇ, ಸೆರೆಬ್ರಲ್ ಪಾಲಿಸಿ, ಇಂಟಲೆಕ್ಚುಯಲ್ ಡಿಸೆಬಿಲಿಟಿ, ಮಲ್ಟಿಪಲ್ ಡಿಸೆಬಲಿಟಿ ರೀತಿಯ ಮಾನಸಿಕ ಸಮಸ್ಯೆಗಳು ಹೆಚ್ಚಾಗುತ್ತಿವೆ. ಈ ಹಿನ್ನೆಲೆಯಲ್ಲೂ ಸಿ.ಆರ್.ಸಿ. ಕಾರ್ಯ ನಿರ್ವಹಿಸಲಿದೆ ಎಂದು ತಿಳಿಸಿದರು.

ವಿಶ್ವ ಆರೋಗ್ಯ ಸಂಘಟನೆಯ ವರದಿ ಪ್ರಕಾರ ಭಾರತದಲ್ಲಿ ಹುಟ್ಟುವ ಮಕ್ಕಳ ಪೈಕಿ ಶೇ.5ರಷ್ಟರಲ್ಲಿ ಆಟಿಸಂ ಸಮಸ್ಯೆ ಕಂಡು ಬರುತ್ತಿದೆ. ಈ ಹಿನ್ನೆಲೆಯಲ್ಲಿ ದೊಡ್ಡ ಕಾರ್ಯಕ್ರಮಗಳ ಅಗತ್ಯ ವಿದೆ. ಚಿಕಿತ್ಸೆ, ತರಬೇತಿ ಹಾಗೂ ಪೂರ್ಣ ಪ್ರಮಾಣದ ಉದ್ಯೋಗ ಕಲ್ಪಿಸುವ ವ್ಯವಸ್ಥೆಗಳನ್ನು ಕಲ್ಪಿಸ ಬೇಕಿದೆ ಎಂದವರು ಅಭಿಪ್ರಾಯ ಪಟ್ಟಿದ್ದಾರೆ.

# ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳಿಗೆ ಲಿಖಿತ ಪರೀಕ್ಷೆ

ದಾವಣಗೆರೆ, ಫೆ. 22 - ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ನಾಗರಿಕ ಸೇವಾ ಪೊಲೀಸ್ ಕಾನ್ಸ್‌ಟೇಬಲ್ (ಪುರುಷ ಮತ್ತು ಮಹಿಳಾ) ಮತ್ತು (ತೃತೀಯ ಲಿಂಗ ಪುರುಷ, ಮತ್ತು ಮಹಿಳಾ) ಹಾಗೂ ಸೇವಾನಿರತ ಮತ್ತು ಬ್ಯಾಕ್‌ಲಾಗ್-1137 ಹುದ್ದೆಗಳಿಗೆ ಲಿಖಿತ ಪರೀಕ್ಷೆಯನ್ನು ಇದೇ ದಿನಾಂಕ 25 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 12.30 ರವರೆಗೆ ನಡೆಸಲಾಗುವುದು ಎಂದು ಪೊಲೀಸ್ ಅಧೀಕ್ಷಕರಾದ ಉಮಾ ಪ್ರಶಾಂತ್ ತಿಳಿಸಿದ್ದಾರೆ.


SVE Society's

**DEVIKA P U SCIENCE AND COMMERCE COLLEGE RANEBENNUR**

Estd in 2007

**WANTED**

The applications are invited for the following Lecturers posts

| Sl. No | Name of the post | No of Vacancies | Qualification | Experience |
|---|---|---|---|---|
| 1 | Lecturer in Biology | 2 | M.sc B.ED | Minimum 5 years |
| 2 | Lecturer in Chemistry | 2 | M.sc B.ED | 5 years |
| 3 | Lecturer in Mathematics | 2 | M.sc B.ED | 5 years |
| 4 | Lecturer in Physics | 2 | M.sc B.ED | 5 years |
| 5 | Lecturer in English | 1 | MA B.ED | 5 years |

The candidates are required to take classes for I ,II Year P.U Board syllabus and NEET/JEE/CET competitive exams. The eligible candidates may submit their resume to the following addresse on or before 1-3-2024. Attractive salary will be given based on their experience and fluency in English. Candidates with higher qualification like Phd will also be considered.

Place: Ranebennur
Date : 20-02-2024

Sd/- C.R.Patil, Chairman
Devika P U College Ranebennur



**ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ**

ಆಡಳಿತ ಕಚೇರಿ, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ

**ಸ್ಥಿರ ಸೊತ್ತುಗಳ ಬಹಿರಂಗ ಹರಾಜು ಪ್ರಕಟಣೆ**

ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ ಇವರು ಪಡೆದುಕೊಂಡಿರುವ ಈ ಕೆಳಗಿನ ಡಿಕ್ರಿ ಅಮಲ್ಜಾರಿ ಕ್ರಮದಲ್ಲಿ ಬ್ಯಾಂಕಿಗೆ ಜಪ್ತಿ/ ಆಧಾರ ಮಾಡಲ್ಪಟ್ಟಿರುವ ಸ್ಥಿರ ಸೊತ್ತನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರು.(ನಿ.441) ದಾವಾ ಪಂಚಾಯ್ತಿ, ಕರ್ನಾಟಕ ರಾಜ್ಯ ಸರ್ಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು ಇವರ ಘನ ನ್ಯಾಯಾಲಯದ ಆದೇಶ ಸಂಖ್ಯೆ ಜೆಆರ್‌ಡಿ/ಯುಬಿಎಫ್/2322/2007-08ರ ಮೇರೆಗೆ ಈ ಕೆಳಗೆ ಕಾಣಿಸಿರುವ ಸ್ಥಿರಾಸ್ತಿಯನ್ನು ಛಡ ಸವಾಲು ಮೂಲಕ ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಮಾರಾಟಾಧಿಕಾರಿ ನಿಯಮ 441 ಇವರ ಷರತ್ತಿಗೊಳಪಟ್ಟು ಹರಾಜು ಮಾಡಲಾಗುವುದು

| ಕ್ರ ಸಂ. | ಬಾಕಿದಾರರ ಹೆಸರು ಮತ್ತು ವಿಳಾಸ | ಸದರಿ ಅಮಲ್ಜಾರಿ ಕ್ರಸಂ. ಮತ್ತು ಇ.ಪಿ. ಖಾತೆಯಿಂದ ಬರಬೇಕಾದ ಬಾಕಿ ಮೊತ್ತ | ಬಹಿರಂಗ ಹರಾಜು ಮಾಡಲ್ಪಡುವ ಸ್ಥಿರ ಸೊತ್ತುಗಳ ವಿವರ | ಬಹಿರಂಗ ಹರಾಜು ಮಾಡಲ್ಪಡುವ ಸ್ಥಳ , ದಿನಾಂಕ ಮತ್ತು ಸಮಯ | ಪಾವತಿಸಬೇಕಾದ ಮುಂಗಡ ಠೇವಣಿ |
|---|---|---|---|---|---|
| 1 | ಮೆ॥ ಮಹೇಶ್ ಬೀಡಿ ವರ್ಕ್ಸ್ ಮಾಲೀಕರು 1) ಮುಷ್ತಾಕ್ ಅಹಮದ್ 2) ಷಫಿ ಅಹಮದ್ 3) ಮೋಹಿನುದ್ದೀನ್ ವಿಳಾಸ: ಡೋರ್ ನಂ.1013, ಸಾಜಿದಾ, ಬೇತೂರು ರಸ್ತೆ, ದಾವಣಗೆರೆ | ಇ.ಪಿ.ಸಂಖ್ಯೆ 80/2009-10 ರೂ. 42,16,794,-00 (ರೂಪಾಯಿ ನವಲತ್ತೆರಡು ಲಕ್ಷದ ಹದಿನಾರು ಸಾವಿರದ ಏಳು ನೂರ ತೊಂಬತ್ನಾಲ್ಕು ಮಾತ್ರ) (ದಿನಾಂಕ 28-01-2024 ಕ್ಕೆ ಇದ್ದಂತೆ + ಮುಂದುವರೆದ ಬಡ್ಡಿ ಹಾಗೂ ಇತರೆ ಖರ್ಚು) | ದಾವಣಗೆರೆ ನಗರ, 3ನೇ ವಾರ್ಡ್, 4ನೇ ಡಿವಿಜನ್, ಅಮರಪ್ಪನ ತೋಟ, ಆನೆಕೊಂಡ, ಇಮಾಂ ನಗರ, ನುರಾನಿ ಮಸೀದಿ ಹತ್ತಿರ, ಮನೆ ನಂ.550/7ಬಿ ಇದರಲ್ಲಿರುವ ಕಟ್ಟಡ ಅಂದಾಜು ಅಳತೆ 30 X 43 ಅಡಿಗಳು. (ಒಟ್ಟು ಅಳತೆ 1290 ಚ. ಅಡಿಗಳು). | ದಿನಾಂಕ:06-03-2024 ನೇ ಬುಧವಾರ ಮದ್ಯಾಹ್ನ 12-00 ಘಂಟೆಗೆ ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ಹದಡಿ ರಸ್ತೆ ಶಾಖೆ, ದಾವಣಗೆರೆ. | 50,000=00 |

**ಹರಾಜಿನ ಷರತ್ತುಗಳು :-** (1) ಹರಾಜಿನಲ್ಲಿ ಭಾಗವಹಿಸುವವರು ಹರಾಜು ಸ್ಥಳದಲ್ಲಿ ಮುಂಗಡ ಠೇವಣಿಯನ್ನು ಡಿ.ಡಿ./ನಗದು ಮುಖಾಂತರ ಪಾವತಿಸಬೇಕು(ಪ್ರಧಾನ ವ್ಯವಸ್ಥಾಪಕರು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ಇವರ ಹೆಸರಿಗೆ) ಇದನ್ನು ಹರಾಜಿನ ಸಮಯಕ್ಕೆ ಅರ್ಧ ಗಂಟೆಗೆ ಮುಂಚಿತವಾಗಿ ಪಾವತಿಸಿ ತಮ್ಮ ವೈಯಕ್ತಿಕ ಮಾಹಿತಿ (ಆಧಾರ ಕಾರ್ಡ್ ಹಾಗೂ ಪಾನ್ ಕಾರ್ಡ್ ಪ್ರತಿಯೊಂದಿಗೆ) ಸಲ್ಲಿಸಿ ಬಿಡ್ಡುದಾರರೆಂದು ನೋಂದಾಯಿಸಿಕೊಳ್ಳಬೇಕು. (2) ಸವಾಲಿನಲ್ಲಿ ಭಾಗವಹಿಸಲು ಇಚ್ಚಿಸುವವರು ಸದರಿ ನಿಯಮಾವಳಿಗೆ ಒಳಪಟ್ಟಿರತಕ್ಕದ್ದು. (3) ಹರಾಜಿಗೆ ಮುನ್ನ ಬ್ಯಾಂಕಿಗೆ ಬರಬೇಕಾದ ಹಣ ಮರುಪಾವತಿಯಾದಲ್ಲಿ ಸದರಿಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ. (4) ನಿಗದಿಪಡಿಸಿದ ಸಮಯದ ನಂತರ ಬಂದ ಠೇವಣಿಗಳನ್ನು ಸ್ವೀಕರಿಸುವುದಿಲ್ಲ. (5) ಅಧಿಕೃತ ಸವಾಲ್ ಮಾಡಿ ಸ್ಥಿರಾಸ್ತಿಯನ್ನು ಕೊಳ್ಳುವವರು ಮಾರಾಟಾಧಿಕಾರಿಯವರು ಹರಾಜು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇಕಡ 15ರಷ್ಟು ಮೊತ್ತವನ್ನು ಕೂಡಲೇ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಮತ್ತು ಸ್ಟಾಂಪ್ ಪೇಪರ್ ಮೊಬಲಗನ್ನು 45 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಪಾವತಿ ಮಾಡಿರುವ ಹಣವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು. (6) ಒಂದು ವೇಳೆ ಸುಸ್ತಿ ಸಾಲಗಾರರು 45 ದಿನಗಳೊಳಗಾಗಿ ಇತರೆ ಎಲ್ಲಾ ಖರ್ಚುಗಳೊಂದಿಗೆ ಸಂಪೂರ್ಣ ಹಣ ಪಾವತಿ ಮಾಡಿದಾಗ ಹರಾಜಿನಲ್ಲಿ ಒಪ್ಪಿಕೊಂಡ ಖರೀದಿದಾರರಿಗೆ ಶೇಕಡಾ 5ರಂತೆ ಮಾರಾಟ ಮಾಡಿದ ಹಣಕ್ಕೆ ಸಮಾಧಾನಾರ್ಥವಾಗಿ ಪರಿಹಾರವನ್ನು ಕರ್ನಾಟಕ ಸಹಕಾರಿ ನಿಯಮ 60, ನಿಯಮ 38 (4) (1)ರ ಪ್ರಕಾರ ಸುಸ್ತಿಸಾಲಗಾರರಿಂದ ಕೊಡಿಸಲಾಗುವುದು. (7) ಸವಾಲುದಾರರು ಹರಾಜನ್ನು ಪ್ರಾರಂಭಿಸುವುದಕ್ಕೆ ಮುನ್ನವೇ ಕಟ್ಟಡ/ಸ್ವತ್ತನ್ನು ಪರಿಶೀಲಿಸಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು. (8) ಮೇಲೆ ಕಾಣಿಸಿದಂತೆ ಸ್ಥಿರಾಸ್ತಿ ಹರಾಜಿನ ಹಣವನ್ನು ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಕಟ್ಟಲು ತಪ್ಪಿದಲ್ಲಿ ಹರಾಜನ್ನು ರದ್ದುಪಡಿಸಿ ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಬಿಡ್ಡುದಾರರಿಗೆ ಇದರ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. (9) ಎಲ್ಲಾ ವಿಧವಾದ ಸ್ಟಾಂಪ್ ಡ್ಯೂಟಿ, ತೆರಿಗೆ, ಕಾನೂನು ಖರ್ಚು, ರಿಜಿಸ್ಟ್ರೇಷನ್ ಫೀ, ಬಾಕಿ ಇರುವ ವಿದ್ಯುತ್ ಬಿಲ್, ದೂರವಾಣಿ ಬಿಲ್, ಕಂದಾಯ ಮತ್ತು ನೀರಿನ ಕಂದಾಯ, ಇತರೆ ಖರ್ಚುಗಳನ್ನು ಸಹ ಖರೀದಿದಾರರೇ ಭರಿಸತಕ್ಕದ್ದು. (10) ಸ್ಥಿರಾಸ್ತಿಯು ಹರಾಜು ನಡೆಯುವ ದಿನ ಯಾವ ರೀತಿ ಇರುತ್ತದೆಯೋ ಮತ್ತು ಹೇಗಿರುತ್ತದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು. (11) **ಯಾವುದೇ ಕಾರಣ ನೀಡದೇ ಹರಾಜನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಮಾರಾಟಾಧಿಕಾರಿಗಳ ಅಧೀನಕ್ಕೆ ಒಳಪಟ್ಟಿರುತ್ತದೆ.** (13) ಮೇಲ್ಕಾಣಿಸಿದ ಸ್ಥಿರಾಸ್ತಿಯನ್ನು ಪರಿಶೀಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಬ್ಯಾಂಕಿನ ಮಾರಾಟಾಧಿಕಾರಿ/ಪ್ರಧಾನ ವ್ಯವಸ್ಥಾಪಕರನ್ನು ಈ ಜಾಹೀರಾತು ಬಂದ ದಿನಾಂಕದಿಂದ ಹರಾಜಿನ ದಿನಾಂಕದವರೆಗೆ ಬೆಳಿಗ್ಗೆ 11-00 ಘಂಟೆಯಿಂದ ಸಂಜೆ 5-00 ಘಂಟೆಯೊಳಗೆ ಸಂಪರ್ಕಿಸಿ ಪರಿಶೀಲಿಸಬಹುದು. (13) ಯಾವುದೇ ತಕರಾರಿದ್ದಲ್ಲಿ ಸಹಕಾರ ಸಂಘಗಳ ಕಾಯಿದೆ, ನಿಯಮಗಳ ಪ್ರಕಾರ ಇತ್ಯರ್ಥಗೊಳಿಸಲಾಗುವುದು.

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾತಿ ಅಧಿಕಾರಿ, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರ ಆದೇಶದ ಮೇರೆಗೆ

ದಿನಾಂಕ : 22-02-2024
ಸ್ಥಳ : ದಾವಣಗೆರೆ

ಸಹಿ/-
**ಬಸವರಾಜ್ ಎಂ.**
ಪ್ರಧಾನ ವ್ಯವಸ್ಥಾಪಕರು

ಸಹಿ/-
ಜ್ಯೋತಿ ಮಾಳಾಪುರ, ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಮಾರಾಟಾಧಿಕಾರಿ, (ನಿ.441)
ಬಾಪೂಜಿ ಕೋ ಆಪರೇಟಿವ್ ಬ್ಯಾಂಕ್ ಲಿ.,ದಾವಣಗೆರೆ.



# ಮಹಿಳಾ ನಿಲಯದಲ್ಲಿ ನವ ದಾಂಪತ್ಯಕ್ಕೆ ಕಾಲಿಟ್ಟ ದಿವ್ಯ ಮತ್ತು ನಾಗರಾಜ್

**ಮಂತ್ರ ಮಾಂಗಲ್ಯದ ಮೂಲಕ ಸರಳವಾಗಿ ನಡೆದ ಮದುವೆ**

**ಬೀಗರಾಗಿ ಕಾರ್ಯನಿರ್ವಹಿಸಿದ ಅಧಿಕಾರಿಗಳು**

ದಾವಣಗೆರೆ, ಫೆ.22- ರಾಷ್ಟ್ರಕವಿ ಕುವೆಂಪುರವರ ಮಂತ್ರ ಮಾಂಗಲ್ಯ ಧಾರಣೆಯಂತೆ ಮಹಿಳಾ ನಿಲಯದ ಎಂ.ದಿವ್ಯ ಇವರ ಮದುವೆಯು ಚಿತ್ರದುರ್ಗ ತಾಲ್ಲೂಕಿನ ಮುದ್ದಾಪುರ ಗ್ರಾಮದ ಟಿ.ನಾಗರಾಜ ಇವರೊಂದಿಗೆ ಬುಧವಾರ ದಾವಣಗೆರೆಯ ರಾಮನಗರದಲ್ಲಿನ ರಾಜ್ಯ ಮಹಿಳಾ ನಿಲಯದಲ್ಲಿ ಅತ್ಯಂತ ಸರಳ, ಕ್ರಮಬದ್ದವಾಗಿ ಮದುವೆ ನಡೆದು ಅಧಿಕಾರಿಗಳು ಬೀಗರಾಗಿ ಭಾಗವಹಿಸಿ, ಎಲ್ಲಾ ಮದುವೆ ಶಾಸ್ತ್ರಗಳನ್ನು ಪೂರೈಸಿ ನವ ದಂಪತಿಗಳಿಗೆ ಶುಭ ಹಾರೈಸಿದರು.

ನೂತನ ದಂಪತಿಗಳಿಗೆ ಶುಭ ಹಾರೈಸಿದ ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಮಾತನಾಡಿ, ಕುವೆಂಪುರವರು ಹಾಕಿ ಕೊಟ್ಟಿರುವಂತಹ ಸರಳವಾದ ಮಂತ್ರ ಮಾಂಗಲ್ಯದಲ್ಲಿ ಇಬ್ಬರು ನವ ದಂಪತಿ ಹೊಸ ಜೀವನಕ್ಕೆ ಕಾಲಿಟ್ಟಿದ್ದಾರೆ. ಈ ಮದುವೆ ಬಹಳ ವಿಶೇಷವಾಗಿ ಇಡೀ ಸಮಾಜಕ್ಕೆ ಮಾದರಿಯಾಗಿದೆ. ವಧು ಕಡೆಯಿಂದ ನಮ್ಮ ಅಧಿಕಾರಿಗಳು ಬಂಧುಗಳಾಗಿ ಕೆಲಸ ನಿರ್ವಹಿಸಿದ್ದಾರೆ. ವರನ ಕಡೆಯಿಂದ ಅವರ ಅಕ್ಕ, ಮಾವಂದಿರು ಭಾಗವಹಿಸಿ ಈ ಮದುವೆಯನ್ನು ಸಾಕ್ಷೀಕರಿಸಿದ್ದಾರೆ. ಇವರು ನವದಂಪತಿಗೆ ಸಂವಿಧಾನ ಪ್ರಸ್ತಾವನೆಯುಳ್ಳ ಪೋಟೋ ಪ್ರೇಮ್ ನೀಡುವ ಮೂಲಕ ಶುಭ ಹಾರೈಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್.ಬಿ.ಇಟ್ನಾಳ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಅಪರ ಜಿಲ್ಲಾಧಿಕಾರಿ ಸೈಯದಾ ಅಫ್ರಿನ್ ಭಾನು ಎಸ್.ಬಳ್ಳಾರಿ, ಉಪವಿಭಾಗಾಧಿಕಾರಿ ದುರ್ಗಶ್ರೀ, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಉಪನಿರ್ದೇಶಕಿ ವಾಸಂತಿ ಉಪ್ಪಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಷಣ್ಮುಖಪ್ಪ ಹಾಗೂ ಇನ್ನಿತರೆ ಅಧಿಕಾರಿಗಳು ಆಗಮಿಸಿ, ವಧು-ವರರಿಗೆ ಶುಭ ಕೋರಿದರು.

ರಾಜ್ಯ ಮಹಿಳಾ ನಿಲಯದಲ್ಲಿ ಕಳೆದ 5 ವರ್ಷಗಳ ಕಾಲ ಆಶ್ರಯ ಪಡೆದ ಎಂ ದಿವ್ಯ (24 ವರ್ಷ) ಮತ್ತು ನಾಗರಾಜ ಎಂಬುವರ ಜೊತೆ ವಿಶೇಷ ರೀತಿಯಲ್ಲಿ ಸಾಂಪ್ರದಾಯವನ್ನುಕೈಬಿಟ್ಟು, ಪುರೋಹಿತರನ್ನುಕರೆಸದೇ ಸರಳ ವಿಧಾನದಲ್ಲಿ ವಿವಾಹ ಮಹೋತ್ಸವವನ್ನು ನೆರವೇರಿಸಲಾಯಿತು.

ಚಿತ್ರದುರ್ಗ ತಾ. ಮುದ್ದಾಪುರ ಗ್ರಾಮದ ನಿವಾಸಿ ಟಿ.ನಾಗರಾಜ್ ತಂದೆ ದಿ. ತಿಮ್ಮಣ್ಣ ಇವರು ವ್ಯವಸಾಯ ವೃತ್ತಿ ಮಾಡುತ್ತಾರೆ. ಆರ್ಥಿಕವಾಗಿ ಸದೃಢವಾಗಿರುತ್ತಾರೆ. ಇವರಿಗೆ ತಂದೆ, ತಾಯಿ ಇಬ್ಬರೂ ಸಹ ಇರುವುದಿಲ್ಲ. ಅಜ್ಜನ ಜೊತೆ ವಾಸವಿದ್ದಾರೆ.

ಕಚೇರಿಯ ಸೂಪರಿಂಟೆಂಡ್ ಮಲ್ಲಿಕಾರ್ಜುನ್, ರಾಜ್ಯ ಮಹಿಳಾ ನಿಲಯ ಅಧೀಕ್ಷಕರಾದ ಶಕುಂತಲಾ ಬಿ.ಕೋಳೂರ ಉಪಸ್ಥಿತರಿದ್ದರು.

ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ನಾಗರಾಜ್ ಸಂವಿಧಾನ ಜಾಗೃತಿ ಜಾಥಾದ ಅಂಗವಾಗಿ ಸಂವಿಧಾನ ಪೀಠಿಕೆ ಓದುವ ಮೂಲಕ ಪ್ರತಿಜ್ಞೆ ಸ್ವೀಕರಿಸಲಾಯಿತು.

# ಜಗಳೂರು: ಸಂವಿಧಾನ ಜಾಗೃತಿ ಜಾಥಾಕ್ಕೆ ಅದ್ದೂರಿ ಸ್ವಾಗತ

ಜಗಳೂರು, ಫೆ. 22- ತಾಲ್ಲೂಕಿನ ಬಿಳಿಚೋಡು ಗ್ರಾಮದಲ್ಲಿ ಸಂವಿಧಾನ ಜಾಗೃತಿ ಜಾಥಾ ಹಾಗೂ ಸ್ತಬ್ಧ ಚಿತ್ರ ರಥವನ್ನು ಅದ್ದೂರಿಯಾಗಿ ಸ್ವಾಗತಿಸಲಾಯಿತು.

ಶ್ರೀ ವಾಣಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಕರ್ನಾಟಕ ಪಬ್ಲಿಕ್ ಶಾಲೆ ಪ್ರೌಢಶಾಲೆ ವಿಭಾಗದ ಎಲ್ಲಾ ಮಕ್ಕಳು ಸೇರಿ ಸಂವಿಧಾನ ಜಾಗೃತಿ ಜಾಥಾ ಹಾಗೂ ಸ್ಥಬ್ಧ ಚಿತ್ರದ ವಾಹನವನ್ನು ಬರಮಾಡಿಕೊಂಡರು.

ಗ್ರಾಮ ಪಂಚಾಯತಿ ಅಧ್ಯಕ್ಷರು ಡಾ. ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಹೂವಿನ ಮಾಲೆ ಹಾಕುವುದರ ಮೂಲಕ ಊರಿಗೆ ಸ್ವಾಗತಿಸಿದರು.

ಸಂವಿಧಾನದ ಬಗ್ಗೆ ಘೋಷಣೆ ಕೂಗಿ ಜಾಗೃತಿ ಮೂಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಕರಿಬಸಪ್ಪ, ಸಹಾಯಕ ನಿರ್ದೇಶಕ ಚಂದ್ರಶೇಖರ್, ಸಿಡಿಪಿಒ ಬೀರೇಂದ್ರ ಕುಮಾರ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



# ದೆಹಲಿಯಲ್ಲಿ ಗುಂಪು ಪ್ರಭುತ್ವದ ಗದ್ದಲ

## ಕರ್ನಾಟಕದ ತೆರಿಗೆದಾರರು, ರೈತರಿಗೆ ದಕ್ಕುವುದೇ ಎಂ.ಎಸ್.ಪಿ. ಲಾಭ ?

**- ಎಸ್.ಎ. ಶ್ರೀನಿವಾಸ್**



ಈ ಹಿಂದೆ ಬಿಜೆಪಿ ಸರ್ಕಾರ ಇದ್ದ ಸಮಯದಲ್ಲಿ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರು ಭ್ರಷ್ಟಾಚಾರ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಪ್ರತಿಭಟನೆ ನಡೆಸಿದ್ದ ಕಾರಣಕ್ಕಾಗಿ ನ್ಯಾಯಾಲಯದ ಎದುರು ಹಾಜರಾಗಲು ಹಾಗೂ ದಂಡ ಕಟ್ಟಲು ಹೈಕೋರ್ಟ್ ಆದೇಶಿಸಿದೆ. ಸರಿಯೇ. ಆದರೆ, ರಾಜಧಾನಿ ದೆಹಲಿಯ ಉಸಿರು ಕಟ್ಟಿಸುವ ರೀತಿಯಲ್ಲಿ ಹೆದ್ದಾರಿ ತಡೆಯಲು, ಪ್ರತಿಭಟನೆ ನಡೆಸಲು ಸೈನಿಕ ಹೋರಾಟ ನಡೆಸುವ ರೀತಿಯಲ್ಲಿ ಬರುವವರ ವಿರುದ್ಧ ಯಾವುದೇ ಕ್ರಮವಿಲ್ಲವೇ?

ಇತ್ತೀಚೆಗೆ ನನ್ನ ತೆರಿಗೆ ನನ್ನ ಹಕ್ಕು ಎಂಬ ಅಭಿಯಾನ ಜೋರಾಗಿದೆ. ಸರಿಯೇ. ಆದರೆ, ಕನಿಷ್ಠ ಬೆಂಬಲ ಬೆಲೆ ಹೆಸರಿನಲ್ಲಿ ಖರೀದಿಸಲಾಗುವ ಧಾನ್ಯಗಳಲ್ಲಿ ರಾಜ್ಯದ ಪಾಲು ಎಷ್ಟಿದೆ? ಈಗಲೂ ಕನಿಷ್ಠ ಬೆಂಬಲ ಬೆಲೆ (ಎಂ.ಎಸ್.ಪಿ.)ಗಾಗಿ ಹೋರಾಟ ನಡೆಸಿದರೆ, ಅದು ರಾಜ್ಯದ ರೈತರಿಗೆ ಸಿಗುವ ಸಾಧ್ಯತೆಯಾದರೂ ಎಷ್ಟಿದೆ? ಒಂದು ವೇಳೆ ರಾಜ್ಯದ ರೈತರಿಗೆ ನೆರವಾಗದೇ ಇದ್ದರೆ, ರಾಜ್ಯದ ತೆರಿಗೆದಾರರ ಹಣ ಅನ್ಯ ರಾಜ್ಯದವರ ಪಾಲಾಗುವುದಿಲ್ಲವೇ?

ಕೇಂದ್ರ ಸರ್ಕಾರದ ಮಾಹಿತಿಯ ಪ್ರಕಾರ, 2014-15ರ ಸಾಲಿನಲ್ಲಿ ಪಂಜಾಬ್‌ನಿಂದ ಖರೀದಿಸಿದ ಭತ್ತದ ಪ್ರಮಾಣ 77.86 ಲಕ್ಷ ಟನ್ ಆಗಿತ್ತು. ಆ ವರ್ಷ ಕರ್ನಾಟಕದಿಂದ ಕೇವಲ 88 ಸಾವಿರ ಟನ್ ಭತ್ತ ಖರೀದಿಸಲಾಗಿತ್ತು. 2021-22ರ ಸಾಲಿನಲ್ಲಿ ಪಂಜಾಬ್‌ನಿಂದ ಖರೀದಿಸಿದ ಭತ್ತದ ಪ್ರಮಾಣ 125.48 ಲಕ್ಷ ಟನ್‌ಗೆ ತಲುಪಿದ್ದರೆ, ಕರ್ನಾಟಕದಿಂದ ಖರೀದಿಸಿದ ಭತ್ತದ ಪ್ರಮಾಣ ಕೇವಲ 1.46 ಲಕ್ಷ ಟನ್ ಆಗಿತ್ತು. ಅಂದರೆ, ಪಂಜಾಬ್‌ಗೆ ಹೋಲಿಸಿದರೆ ಕರ್ನಾಟಕದಲ್ಲಿ ಖರೀದಿಸುತ್ತಿರುವ ಭತ್ತದ ಪ್ರಮಾಣ ಶೇ.1.16 ಮಾತ್ರ.

ಇಷ್ಟಾದರೂ, ಬೆಂಬಲ ಬೆಲೆ ಮೂಲಕ ಖರೀದಿಸಿ ಪಡಿತರ ಮೂಲಕ ವಿತರಿಸುವ ಅಕ್ಕಿಯ ಗುಣಮಟ್ಟವನ್ನು ದೇವರೇ ಮೆಚ್ಚಬೇಕು. ಅತ್ತ ತೆರಿಗೆಯನ್ನೂ ಕಟ್ಟಿ, ಇತ್ತ ಉಣ್ಣುವ ಭತ್ತವನ್ನು ದುಡ್ಡು ಕೊಟ್ಟು ಕೊಂಡುಕೊಳ್ಳುವ ಪರಿಸ್ಥಿತಿ ಮಧ್ಯಮ ವರ್ಗದವರದ್ದು.

ಕಳೆದ ಬಾರಿ ಕೇಂದ್ರ ಸರ್ಕಾರ ಮೂರು ಕರಾಳ ಕೃಷಿ ಕಾಯ್ದೆಗಳನ್ನು ಜಾರಿಗೆ ತಂದಾಗ ಪಟ್ಟು ಹಿಡಿದು ವಾಪಸ್ ಪಡೆಯುವಂತೆ ಮಾಡಲಾಗಿತ್ತು. ಈ ಬಾರಿ ಲೋಕಸಭೆಯ ಕೊನೆಯ ಅಧಿವೇಶನ ಮುಗಿದಿದೆ. ಪ್ರಸಕ್ತ ಲೋಕಸಭೆಗೆ ಇನ್ನು ಕೆಲವೇ ದಿನಗಳು ಉಳಿದಿವೆ. ಈ ಸಂದರ್ಭದಲ್ಲಿ ದೂರಗಾಮಿ ಪರಿಣಾಮ ಬೀರುವ ಕೃಷಿ ಸಂಬಂಧಿತ ನಿರ್ಧಾರ ಗಳನ್ನು ತೆಗೆದುಕೊಳ್ಳಲು ಮುಂದಾಗುವುದು ಸರಿಯೇ? ಸಂವಿಧಾನದ ಪರವಾಗಿ ಅಭಿಯಾನ ನಡೆಸುವವರು ಈ ವಿಷಯದಲ್ಲಿ ಸುಮ್ಮನಿರಬೇಕೇ?

ಕಳೆದ ಕೆಲ ವರ್ಷಗಳಲ್ಲಿ ರೈತರೆಂದರೆ ಪಂಜಾಬಿನ ರೈತರು ಎಂಬ ಭಾವನೆಯನ್ನು ಕೆಲ ಮಾಧ್ಯಮಗಳು 24X7 ರೀತಿಯಲ್ಲಿ ಬಿತ್ತರಿಸುತ್ತಿವೆ. ದೇಶಾದ್ಯಂತ ರೈತರಿದ್ದಾರೆ ಎಂಬುದನ್ನೇ ಅವರು ಮರೆತಿರುವಂತಿದೆ. ಅಲ್ಲದೇ, ಪ್ರತಿ ರಾಜ್ಯದ ಕೃಷಿ ಪರಿಸ್ಥಿತಿಯೂ ಭಿನ್ನವಾಗಿದೆ. ಹೀಗಾಗಿ ಕೃಷಿಯನ್ನು ರಾಜ್ಯ ಪಟ್ಟಿಯಲ್ಲಿ ಸೇರಿಸಲಾಗಿದೆ. ಇಷ್ಟಾದರೂ, ಕೇಂದ್ರ ಸರ್ಕಾರದ ಮೂಲಕ ಎಂ.ಎಸ್.ಪಿ. ಹೇರಿಕೆ ಮಾಡಲು ಕೆಲ ರಾಜ್ಯಗಳ ರೈತರು ಹೋರಾಟ ನಡೆಸುತ್ತಿದ್ದಾರೆ.

ಕರಾಳ ಕೃಷಿ ಕಾಯ್ದೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಈ ರೈತರ ಮುಂದೆ ಈಗಾಗಲೇ ಬೆನ್ನು ಮೂಳೆ ಇಲ್ಲದ ರೀತಿಯಲ್ಲಿ ವರ್ತಿಸಿತ್ತು. ಈಗಾಗಲೇ ಪಂಚ ವಾರ್ಷಿಕ ಬೆಂಬಲ ಬೆಲೆ ಖರೀದಿಯ ಪ್ರಸ್ತಾಪ ಮುಂದಿಟ್ಟಿದೆ. ಅದನ್ನು ಪಂಜಾಬ್ ರೈತರು ತಿರಸ್ಕರಿಸಿದ್ದೂ ಆಗಿದೆ. ಪಂಜಾಬ್ ರೈತರ ಮನವೊಲಿಸಲು ಇನ್ನಷ್ಟು ಉದಾರ ಪ್ರಸ್ತಾಪ ಮುಂದಿಡುವ ಸಾಧ್ಯತೆ ಇಲ್ಲದಿಲ್ಲ. ಹೀಗೆ ಗದ್ದಲ - ಹಿಂಸಾಚಾರ ನಡೆಸುವ ರೈತರ ಮನವೊಲಿಕೆಗೆ ಸರ್ಕಾರ ಖಜಾನೆ ಖಾಲಿ ಮಾಡಿಕೊಳ್ಳಲು ಮುಂದಾದರೆ ನಮ್ಮ ಕರ್ನಾಟಕದ ತೆರಿಗೆದಾರರ ಹಣ ಪೋಲಾಗುವುದಿಲ್ಲವೇ? ಗ್ಯಾರಂಟಿಗಳಿಂದ ಖಜಾನೆ ಖಾಲಿಯಾಗುತ್ತದೆ ಎನ್ನುವವರು, ಈ ವಿಷಯದಲ್ಲಿ ಸುಮ್ಮನಿರಬಹುದೇ?

ಆರ್ಥಿಕ, ರಾಜಕೀಯ, ಕೃಷಿ, ಸಂವಿಧಾನ ಯಾವ ದೃಷ್ಟಿಯಿಂದ ನೋಡಿದರೂ ಚುನಾವಣೆ ಹೊಸ್ತಿಲಲ್ಲಿರುವ ಈ ಸಂದರ್ಭದಲ್ಲಿ ಹಳೆಯ ದಾಗಲಿರುವ ಸರ್ಕಾರದ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಸರಿಯಾಗದು. ಕೃಷಿ ಸಂಬಂಧದ ಬೃಹತ್ ನಿರ್ಧಾರಗಳನ್ನು ತೆಗೆದು ಕೊಳ್ಳುವಾಗ ಇಡೀ ದೇಶದಲ್ಲಿ ಚರ್ಚೆಯಾಗಬೇಕು. ಎಲ್ಲರ ಅಭಿ ಪ್ರಾಯ ಪಡೆಯಬೇಕು. ಸರ್ಕಾರಿ ಹಣವನ್ನು ಎಲ್ಲರ ಶ್ರೇಯೋಭಿವೃದ್ಧಿಗೆ ಸಮಾನವಾಗಿ ಬಳಸಬೇಕೇ ಹೊರತು, ಕೆಲವೇ ಪ್ರಾಂತ್ಯದವರ ಹಿತಕ್ಕೆ ಅಲ್ಲ.

ಕರ್ನಾಟಕದಿಂದ ರೈತರು ಬುಲ್ಡೋಜರ್ ಇತ್ಯಾದಿಗಳನ್ನು ಹೊತ್ತುಕೊಂಡು ಹೋಗಿ ದೆಹಲಿಯಲ್ಲಿ ಪ್ರತಿಭಟನೆ ನಡೆಸಲು ಸಾಧ್ಯವಾಗದೇ ಇರಬಹುದು. ಹಾಗೆಂದ ಮಾತ್ರಕ್ಕೆ ನಿರ್ಧಾರ ಪ್ರಕ್ರಿಯೆಯಲ್ಲಿ ಕರ್ನಾಟಕ ರೈತರ ತೂಕವನ್ನು ಕಡೆಗಣಿಸಬಾರದು. ಇಲ್ಲವಾದರೆ ಪ್ರಜಾಪ್ರಭುತ್ವ ಎನ್ನುವುದು ಗುಂಪು ಪ್ರಭುತ್ವ ಆಗುವ ದಿನಗಳು ದೂರವಿಲ್ಲ.

# ಮಲಬಾರ್ ಗೋಲ್ಡ್‌ಗೆ ರ್‍ಯಾಂಕಿಂಗ್ ಪಟ್ಟಿಯಲ್ಲಿ ಅಗ್ರ ಸ್ಥಾನ

**ಮಲಬಾರ್ ಗ್ರೂಪ್ ಅಧ್ಯಕ್ಷ ಎಂ.ಪಿ.ಅಹ್ಮದ್ ಸಂತಸ**

ಬೆಂಗಳೂರು, ಫೆ.22- ಆಭರಣ ಸಂಸ್ಥೆಗಳಲ್ಲಿ ಮುಂಚೂಣಿಯಲ್ಲಿರುವ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ಡೆಲಾಯ್ಟ್‌ನ ಗ್ಲೋಬಲ್ ಪವರ್ ಆಫ್ ಲಕ್ಷುರಿ ಗೂಡ್ಸ್ 2023ರ ರ್‍ಯಾಂಕಿಂಗ್‌ನಲ್ಲಿ 19ನೇ ಸ್ಥಾನ ಗಳಿಸುವ ಮೂಲಕ ಹೆಗ್ಗಳಿಕೆ ಸಾಧಿಸಿದೆ. ದೇಶದ ಮಾರುಕಟ್ಟೆಯಲ್ಲಿ ತನ್ನ ಪ್ರಾಬಲ್ಯವನ್ನು ಪುನರುಚ್ಚರಿಸುವ ಮೂಲಕ ಅಗ್ರ ಸ್ಥಾನವನ್ನು ಪಡೆದು ಕೊಂಡಿದೆ.

ಈ ಶ್ರೇಯಾಂಕ ಪಟ್ಟಿಯನ್ನು ಆಭರಣಗಳು, ಉಡುಪುಗಳು, ಕೈಗಡಿಯಾರಗಳು ಮತ್ತು ಸೌಂದರ್ಯ ಉತ್ಪನ್ನಗಳ ಜಾಗತಿಕ ಮಾರಾಟ ಮತ್ತು ಬ್ರ್ಯಾಂಡ್ ಮೌಲ್ಯವನ್ನು ನಿರ್ಣಯಿಸುವ ಮೂಲಕ ಸಿದ್ಧಪಡಿಸಲಾಗು ತ್ತದೆ. ಜಾಗತಿಕ ಮಾರಾಟ ಮತ್ತು ಬ್ರ್ಯಾಂಡ್ ಮೌಲ್ಯದಲ್ಲಿ ಮಲಬಾರ್‌ನ ಅಸಾಧಾರಣ ಸಾಧನೆಯು ಅದನ್ನು ಈ ವಿಶಿಷ್ಟ ಪಟ್ಟಿಯಲ್ಲಿ ಸೇರಿಸಿದೆ. ಇದು ಬ್ರ್ಯಾಂಡ್‌ಗೆ ಮಹತ್ವದ ಮೈಲಿಗಲ್ಲನ್ನು ಗುರುತಿಸಿದೆ. ವಿಶ್ವದ ಎರಡನೇ ಅತಿದೊಡ್ಡ ಮಾರುಕಟ್ಟೆಯಾದ ಭಾರತದ ಆಭರಣ ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿನ ಕ್ರಿಯಾತ್ಮಕ ಬದಲಾವಣೆಗಳನ್ನು ಡೆಲಾಯ್ಟ್ ವರದಿ ಎತ್ತಿ ತೋರಿಸುತ್ತದೆ. 30 ವರ್ಷಗಳ ಶ್ರೇಷ್ಠತೆಯನ್ನು ಆಚರಣೆ ಮಾಡುವ ಬ್ರ್ಯಾಂಡ್ ಸಮಕಾಲೀನ ಮತ್ತು ಸಾಂಪ್ರದಾಯಿಕ ಆಭರಣ ಶೈಲಿಗಳ ವ್ಯಾಪಕ ಸಂಗ್ರಹವನ್ನು ಹೊಂದಿದೆ.

ಈ ಬಗ್ಗೆ ಮೆಚ್ಚುಗೆ ಮತ್ತು ಹರ್ಷ ವ್ಯಕ್ತಪಡಿಸಿರುವ ಮಲಬಾರ್ ಗ್ರೂಪ್ ಅಧ್ಯಕ್ಷ ಎಂ.ಪಿ.ಅಹ್ಮದ್ ಅವರು, ಡೆಲಾಯ್ಟ್ ನಂತಹ ಜಾಗತಿಕ ವೇದಿಕೆಯಲ್ಲಿ ಗುರುತಿಸಿಕೊಂಡಿರುವುದು ನಮಗೆ ಸಿಕ್ಕಿರುವ ದೊಡ್ಡ ಗೌರವವಾಗಿದೆ ಎಂದಿದ್ದಾರೆ. ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ಪ್ರಸ್ತುತ 13 ದೇಶಗಳಲ್ಲಿ 340 ಕ್ಕೂ ಹೆಚ್ಚು ಸ್ಟೋರ್‌ಗಳನ್ನು ಹೊಂದುವ ಮೂಲಕ ಜಾಗತಿಕ ಜಾಲವನ್ನು ಹೊಂದಿದೆ. ತನ್ನ ಒಟ್ಟು ಲಾಭಾಂಶದಲ್ಲಿ ಶೇ.5 ರಷ್ಟು ಭಾಗವನ್ನು ಸಾಮಾಜಿಕ ಕಾರ್ಯಗಳಿಗೆ ಮೀಸಲಿಡುವ ಮೂಲಕ ಸಂಸ್ಥೆಯು ಸಾಮಾಜಿಕ ಕಳಕಳಿಯನ್ನು ಹೊಂದಿರುವ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಅವರು ವಿವರಿಸಿದ್ದಾರೆ.

# ಬೋರ್ ಕೊರೆಸಲು ಅನುಮತಿ ಕಡ್ಡಾಯ

**ಭದ್ರಾ ನಾಲೆಯ ಕೊನೆ ಭಾಗಕ್ಕೆ ನೀರು ತಲುಪಿಸಲು ಕ್ರಮ**

**ನೀರಿನ ಸಮಸ್ಯೆಗೆ 24 ಗಂಟೆಗಳಲ್ಲಿ ಕ್ರಮಕ್ಕೆ ಸೂಚನೆ**

(1ನೇ ಪುಟದಿಂದ) ಅಂತರ್ಜಲ ಕುಸಿತದ ಕಾರಣದಿಂದಾಗಿ ಖಾಸಗಿ ಬೋರ್‌ವೆಲ್ ಬಾಡಿಗೆ ಪಡೆದು ನೀರು ಪೂರೈಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.

ಯಾವುದೇ ಗ್ರಾಮದಲ್ಲಿ ನೀರಿನ ಸಮಸ್ಯೆ ಕಾಣಿಸಿಕೊಂಡರೂ, 24 ಗಂಟೆಗಳಲ್ಲಿ ಪರಿಹಾರ ಕ್ರಮ ತೆಗೆದುಕೊಳ್ಳಬೇಕೆಂದು ಪಿ.ಡಿ.ಒ.ಗಳಿಗೆ ಸೂಚನೆ ನೀಡಲಾಗಿದೆ. ಖಾಸಗಿ ಬೋರ್‌ವೆಲ್ ಪಡೆಯಲಾಗುವುದು, ಅಲ್ಲಿಯೂ ಸಮಸ್ಯೆ ಬಗೆಹರಿಯದೇ ಇದ್ದರೆ ಟ್ಯಾಂಕರ್‌ಗಳ ಬಳಕೆ ಮಾಡಿಕೊಳ್ಳಲಾಗುವುದು ಎಂದು ವೆಂಕಟೇಶ್ ಹೇಳಿದರು.

ಬಹುಗ್ರಾಮ ಕುಡಿಯುವ ನೀರು ಯೋಜನೆ ಇರುವ ಗ್ರಾಮಗಳಲ್ಲಿ ಸಮಸ್ಯೆ ಇಲ್ಲ. ಭದ್ರಾ ಜಲಾಶಯ ಹಾಗೂ ತುಂಗಭದ್ರಾ ನದಿ ಮೂಲಕ ನೀರು ಪಡೆಯುತ್ತಿರುವುದರಿಂದ ನಗರಗಳು ಹಾಗೂ ಬಹುಗ್ರಾಮ ಯೋಜನೆ ವ್ಯಾಪ್ತಿಯಲ್ಲಿ ಸಮಸ್ಯೆ ಕಂಡು ಬಂದಿಲ್ಲ. ಶಾಂತಿಸಾಗರದಿಂದ ಹಲವು ಗ್ರಾಮಗಳಿಗೆ ನೀರು ಪೂರೈಕೆಯಾಗುತ್ತಿದ್ದು ಭದ್ರಾ ಕಾಲುವೆ ಮೂಲಕ ಶಾಂತಿಸಾಗರಕ್ಕೆ ನೀರು ಬಿಡಿಸಲಾಗಿದೆ ಎಂದರು.

ಕಾಲುವೆಯ ಕೊನೆ ಭಾಗದ ರೈತರಿಗೂ ನೀರು ತಲುಪಿಸುವ ಉದ್ದೇಶದಿಂದ ನಾಲೆಗೆ ಅಕ್ರಮವಾಗಿ ಅಳವಡಿಸಲಾಗಿದ್ದ ಪಂಪ್‌ಸೆಟ್‌ಗಳ ತೆರವಿಗೆ ತಂಡಗಳನ್ನು ರಚಿಸಿ ಕ್ರಮ ಕೈಗೊಳ್ಳಲಾಗಿದೆ. ಕಾಲುವೆ ಹಾಗೂ ನದಿಗಳ ಪಕ್ಕದಲ್ಲಿ 144ನೇ ಸೆಕ್ಷನ್ ಜಾರಿಗೊಳಿಸಲು ತಹಶೀಲ್ದಾರರಿಗೆ ಸೂಚನೆ ನೀಡಲಾಗಿದೆ ಎಂದರು.

ಚಾನಲ್‌ನಲ್ಲಿ ಗರಿಷ್ಠ ಪ್ರಮಾಣದ 3 ಸಾವಿರ ಕ್ಯೂಸೆಕ್ಸ್ ನೀರು ಹರಿಸಲು ಸೂಚನೆ ನೀಡಲಾಗಿದೆ. ಇದೇ ವೇಳೆ ಅಕ್ರಮ ಪಂಪ್‌ಸೆಟ್‌ಗಳನ್ನು ತೆರವುಗೊಳಿಸಲಾಗಿದೆ. ತ್ಯಾವಣಗಿ, ಕಕ್ಕರಗೊಳ್ಳ, ಆವರಗೊಳ್ಳ ಹಾಗೂ ಮಲೇಬೆನ್ನೂರು ಮುಂತಾದ ಕೊನೆ ಭಾಗದ ಪ್ರದೇಶಗಳಿಗೆ ನಾಳೆ ನೀರು ತಲುಪುವ ನಿರೀಕ್ಷೆ ಇದೆ ಎಂದು ಜಿಲ್ಲಾಧಿಕಾರಿ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

# ಪ್ರತಿಪಕ್ಷಗಳು ದ್ವೇಷದ ದಾರಿ ಬಿಡಲು ಸಿದ್ಧವಿಲ್ಲ : ಪ್ರಧಾನಿ

ಮೆಹಸಾನಾ, ಫೆ. 22 – ಪ್ರತಿಪಕ್ಷಗಳು ಈಗಲೂ ನಕಾರಾತ್ಮಕತೆಯಲ್ಲಿ ಬದುಕುತ್ತಿದ್ದಾರೆ. ಭವ್ಯ ರಾಮ ಮಂದಿರ ನಿರ್ಮಾಣವಾದರೂ ದ್ವೇಷದ ದಾರಿ ಬಿಡಲು ಸಿದ್ಧವಿಲ್ಲ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಟೀಕಿಸಿದ್ದಾರೆ.

ಗುಜರಾತ್‌ನ ಮೆಹಸಾನಾ ಜಿಲ್ಲೆಯಲ್ಲಿ ವಲಿನಾಥ ಮಹಾದೇವ ದೇವಾಲಯದ ಉದ್ಘಾಟನೆ ನೆರವೇರಿಸಿದ ನಂತರ ಮಾತನಾಡಿದ ಅವರು, ಸ್ವಾತಂತ್ರ್ಯ ದೊರೆತ ನಂತರ ಸುದೀರ್ಘ ಕಾಲ ಕಾಂಗ್ರೆಸ್ ಪಕ್ಷವು ಅಭಿವೃದ್ಧಿ ಹಾಗೂ ಪರಂಪರೆಯನ್ನು ಪ್ರತ್ಯೇಕವಾಗಿ ಕಂಡಿತ್ತು. ಇವುಗಳ ನಡುವೆ ಸಂಘರ್ಷ ಸೃಷ್ಟಿಸಿತ್ತು ಎಂದರು.

ಈ ವ್ಯಕ್ತಿಗಳು ಸೋಮನಾಥ ದೇವಾಲಯದಂತಹ ಪವಿತ್ರ ಸ್ಥಳವನ್ನೂ ವಿವಾದಕ್ಕೆ ಸಿಲುಕಿಸಿದ್ದರು. ಗುಜರಾತ್‌ನ ಪಂಚಮಹಲ್ ಜಿಲ್ಲೆಯ ಪಾವಗಡ ದೇವಾಲಯದ ಮೇಲೆ ಧರ್ಮಧ್ವಜ ಹಾರಿಸಲೂ ಬಿಟ್ಟಿರಲಿಲ್ಲ ಎಂದವರು ಹೇಳಿದರು.

ಈ ಜನರೇ ರಾಮ ದೇವರ ಅಸ್ತಿತ್ವವನ್ನು ಪ್ರಶ್ನಿಸಿದ್ದರು. ರಾಮ ದೇವಾಲಯ ನಿರ್ಮಾಣಕ್ಕೆ ಅಡ್ಡಿಪಡಿಸಿದ್ದರು. ಇಂದು ಅಯೋಧ್ಯೆಯಲ್ಲಿ ಭವ್ಯ ರಾಮ ಮಂದಿರ ನಿರ್ಮಾಣವಾಗಿದೆ. ಇಡೀ ದೇಶ ಸಂತೋಷವಾಗಿದೆ. ಆದರೆ, ನಕಾರಾತ್ಮಕತೆಯಲ್ಲಿ ಬದುಕುತ್ತಿರುವವರು, ದ್ವೇಷದ ಮಾರ್ಗ ಬಿಡಲು ಸಿದ್ಧರಿಲ್ಲ ಎಂದು ಟೀಕಿಸಿದರು.


**ಮಹಾಲಕ್ಷ್ಮಿ ಲೇಔಟ್‌ನಲ್ಲಿ 30x40 ಸೈಟ್ ಮಾರಾಟಕ್ಕೆ**
ಡಾಲರ್ಸ್ ಕಾಲೋನಿ 30x40 ಸೈಟ್, ಮನೆ ಗ್ಲಾಸ್ ಹೌಸ್ 30x50, ಸೈಟ್ ಎಸ್.ಎಸ್. ಲೇಔಟ್ ಮನೆಗಳು ಆಂಜನೇಯ ಸಿದ್ದವೀರಪ್ಪ ಸೈಟ್, ಮನೆ ಬೆಂಗಳೂರು, ತರಳಬಾಳು ಲೇಔಟ್ 30x50.
76765 58585 ವೀರೇಶ್

**ಬಾಡಿಗೆಗೆ ಇದೆ**
ಪಿ.ಜೆ. ಬಡಾವಣೆಯ 8ನೇ ಮೇನ್, 8ನೇ ಕ್ರಾಸ್‌ನಲ್ಲಿ ಎರಡು ಬೆಡ್ ರೂಂ, ಒಂದು ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
94480 28103

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಅರ್ಚಕರು ಬೇಕಾಗಿದ್ದಾರೆ**
ದಾವಣಗೆರೆಯ ಕುಂದುವಾಡ ಕೆರೆ ಹತ್ತಿರದ ಬಾಲಾಜಿ ನಗರದಲ್ಲಿ ಹೊಸದಾಗಿ ನಿರ್ಮಿಸಿರುವ 5 ದೇವರ ದೇವಸ್ಥಾನಕ್ಕೆ ಅರ್ಚಕರು ಬೇಕಾಗಿದ್ದಾರೆ. ಇವರಿಗೆ ಸೂಕ್ತ ಸೌಲಭ್ಯ ನೀಡಲಾಗುವುದು. ಸಂಪರ್ಕಿಸಿ :
ಮೊ.: 63607 98936

**ಮನೆಯ ರೀ ಪೇಟಿಂಗ್**
ಮನೆಯ ಒಳಗಡೆ ಮತ್ತು ಹೊರಗಡೆ ಹೊಸದ ರೀತಿಯಾಗಿ ನಿಮ್ಮ ಇಚ್ಛೆಗೆ ಅನುಗುಣವಾಗಿ ಉತ್ತಮವಾದ ಪೇಂಟ್ ಮಾಡಿ ಕೊಡಲಾಗುವುದು. ದರ ಕಡಿಮೆ ಉತ್ತಮ ಕೆಲಸಕ್ಕಾಗಿ ಸಂಪರ್ಕಿಸಿ :
72046 33302

**ಶೋ ರೂಂಗೆ ಬೇಕಾಗಿದ್ದಾರೆ**
SHANTHI AGENCIES ELECTRIC VEHICLES
Male-Field work-05
Female-Executive- 02
Admin -01
92432 19553
Opp. Stadium, Hadadi Road, Davangere.

**ಮನೆ ಬಾಡಿಗೆಗೆ/ಲೀಸ್‌ಗಿದೆ**
ಜಯನಗರ 1 ಮತ್ತು 2ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆಗಳು ಫ್ಯಾಮಿಲಿ, ವಿದ್ಯಾರ್ಥಿನಿಯರಿಗೆ, ಕೆಲಸಕ್ಕೆ ಹೋಗುವ ಹೆಣ್ಣು ಮಕ್ಕಳಿಗೆ ಬಾಡಿಗೆಗೆ/ಲೀಸ್‌ಗಿವೆ.
9845137364, 8050533389

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಲಾರಿ ಡ್ರೈವರ್ ಬೇಕಾಗಿದ್ದಾರೆ**
ಐಗೂರಿನಲ್ಲಿರುವ ಫ್ಯಾಕ್ಟರಿಗೆ ಅನುಭವವುಳ್ಳ ಲಾರಿ ಡ್ರೈವರ್ ಹಾಗೂ ಐಟಿಐ ಫಿಟ್ಟರ್ ಆಗಿರುವ ಮೆಕ್ಯಾನಿಕ್ ಬೇಕಾಗಿದ್ದಾರೆ.
99016 76700

**ಬೇಕಾಗಿದ್ದಾರೆ**
ಎಂ.ಸಿ.ಸಿ. 'ಬಿ' ಬ್ಲಾಕ್‌ನ ಕುವೆಂಪು ನಗರದಲ್ಲಿರುವ ಚಿಂದೋಡಿ ಲೀಲಾ ಕಲಾ ಕ್ಷೇತ್ರದಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ :
99164-54770

**ಲೇಬರ್ ಬೇಕಾಗಿದ್ದಾರೆ**
ಸಂಪರ್ಕಿಸಿ : ಮನ್ವಿತ ಎಂಟರ್‌ಪ್ರೈಸಸ್
63620 23451, 97434 37003

**ಹುಡುಗರು ಬೇಕಾಗಿದ್ದಾರೆ**
ಕನ್ನಡ ಭಾಷಾ ಜ್ಞಾನ ಮತ್ತು ಟೈಪಿಂಗ್ ಅನುಭವವಿರುವವರು ಬೇಕಾಗಿದ್ದಾರೆ ಸಂಪರ್ಕಿಸಿ : ಬೆಳಿಗ್ಗೆ 11 ರಿಂದ ಸಂಜೆ 5.30ರವರೆಗೆ
08192 254736

**ಬಾಡಿಗೆಗೆ ಇದೆ**
ಹಳೇ ಪಿ.ಬಿ.ರಸ್ತೆ, ಶ್ರೀಗಂಧ ಲಾಡ್ಜ್ ಪಕ್ಕ, ಮೊದಲನೇ ಮಹಡಿ 3600 ಚ.ಅಡಿ. ಎರಡನೇ ಮಹಡಿ 3600 ಚ.ಅಡಿ. ಸಂಪರ್ಕಿಸಿ.
94480 28103

**WANTED**
• SALESMAN,
• SALESGIRLS • HELPERS
• CASHIER • MANAGER
Contact :
Gangavathi Silk Saree Center, Binny Company Road, Davangere - 577001.

**ಕೆಲಸಕ್ಕೆ ಬೇಕಾಗಿದ್ದಾರೆ**
NISARGA ENTERPRISES INTERIOR AND EXTERIOR DESIGNER OFFICE SURYA COLOR DISTRIBUTOR SHOP
ಯುವಕ/ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
MR. SRINIVAS Y.
9448534659, 8310092069

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಊಟ, ತಿಂಡಿ, ವ್ಯವಸ್ಥೆ ಇರುತ್ತದೆ.
ಎಸ್.ಟಿ. ಸೋಮಶೇಖರ್
98803 37686

**ಬಾಡಿಗೆಗೆ ಇದೆ**
5ನೇ ಮೇನ್, ರಾಮ್ ಅಂಡ್ ಕೋ ಸರ್ಕಲ್ ಹತ್ತಿರ, 1ನೇ ಮಹಡಿಯಲ್ಲಿ ಅಟ್ಯಾಚ್ ಬಾತ್ ರೂಮ್ ಇರುವ ರೂಮ್ ಬಾಡಿಗೆಗೆ ಇದೆ. ಸಂಪರ್ಕಿಸಿ :
97431 50555

**ಮನೆ ಮಾರಾಟಕ್ಕೆ ಇದೆ**
ದಾವಣಗೆರೆ ಚಿಕ್ಕಮ್ಮಣಿ ಲೇಔಟ್ ಸರಸ್ವತಿ ಡಾಬಾ ಸ್ಟಾಪ್ ಹತ್ತಿರ ಉತ್ತರಾಭಿಮುಖವಾಗಿರುವ 30x40 ಅಳತೆಯ 2 ಮಹಡಿ, ನೆಲ ಮಹಡಿ 30x40 2BHK, ಮೊದಲನೇ ಮಹಡಿ 20x30 2BHK 2 ಪೂರ್ವ ದಿಕ್ಕಿನ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ.
98447 31736

**ದಾಖಲಾತಿ ಕಳೆದಿದೆ**
ಎಸ್.ಪಿ. ಶಿವರಾಜ್ ಆದ ನಾನು ಎಸ್.ಎಸ್. ಬೋಂದಾಡೆ ಇಂಡಸ್ಟ್ರೀಸ್ ಮ್ಯಾನೇಜರ್ ಆದ ನಾನು 22.02.2024 ವಸಂತ ಟಾಕೀಸ್ ರೋಡ್‌ನಲ್ಲಿ ಹೋಗುವಾಗ ಕೆಐಡಿಬಿ ಡಾಕ್ಯುಮೆಂಟ್ಸ್ ಕಳೆದುಕೊಂಡಿರುತ್ತೇನೆ. ಯಾರಿಗಾದರೂ ಸಿಕ್ಕಿದಲ್ಲಿ ತಲುಪಿಸಬೇಕಾಗಿ ವಿನಂತಿ
70190 73256

**ಬಾಡಿಗೆಗೆ / ಲೀಸ್‌ಗೆ ಇದೆ**
ಸಿಮೆಂಟ್ ಇಟ್ಟಿಗೆ ಫ್ಯಾಕ್ಟರಿ (ಬ್ರಿಕ್ಸ್) ಬಾಡಿಗೆ ಅಥವಾ ಲೀಸ್‌ಗೆ ಕೊಡಲಾಗುವುದು. ಮಲೇಬೆನ್ನೂರು ರಸ್ತೆ, ಜರೀಕಟ್ಟೆ ದಾವಣಗೆರೆ ತಾ. ಜಿ.
99017 74089

**ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ SSLC ನೇರ ಪರೀಕ್ಷೆ**
IInd PUC/Senior Secondary, Arts/Commerce/Science B.Sc.-Agriculture, B.Tech All branches, D.Pharma, B.Ed., PhD regular B.A., B.com., B.Sc., M.A., M.Com., MBA, MLIB, Correspondence.
SS Global Institute for Higher Education
72593 59861/99863 45266
ವಿ. ಸೂ: ಫೀಸನ್ನು ಕಂತಿನಲ್ಲಿ ಪಾವತಿಸಬಹುದು

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಸೇಲ್ಸ್ ಮೆನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಗ್ರಾಮೀಣ ಪ್ರದೇಶದವರಿಗೆ ಅವಕಾಶ. ವೇತನದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98442-94446

**ಬೇಕಾಗಿದ್ದಾರೆ**
ಅಕೌಂಟೆಂಟ್ ಹುದ್ದೆಗೆ ಲೇಡಿಸ್ ಬೇಕಾಗಿದ್ದಾರೆ. ಕಲಿಯುವವರಿಗೂ ಅದ್ಯತೆಯುಂಟು ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಮೊ : 94838 62779

**ಸಂಜೀವಿನಿ ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರನ್ನು ನೋಡಿಕೊಳ್ಳಲು ಹೋಮ್ ನರ್ಸ್ (ಕೇರ್‌ಟೇಕರ್ಸ್) ಬೇಕಾಗಿದ್ದಲ್ಲಿ ಸಂಪರ್ಕಿಸಿ ಹಾಗೂ ವಯೋವೃದ್ಧರನ್ನು ನೋಡಿಕೊಳ್ಳಲು ಮಹಿಳೆಯರು ಮತ್ತು ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 5th, 7th, 10th, PUC, GNM, ANM, ಉಚಿತ ಊಟ, ವಸತಿಯೊಂದಿಗೆ 15,000 ರಿಂದ 25,000 ರೂ.
ಫೋ. : 91486 83185

**ಡ್ರೈವರ್ ಬೇಕಾಗಿದ್ದಾರೆ**
TATA Ace / Ashoka Leyland
70190 51306

**AVAILABLE FOR RENT**
"Khadi Siddhappa Arcade"
Office/commercial Space,
Basement- 700 sqft, Ground Floor- 600 sqft, 1st Floor- 800 sqft
Lawyer Main Road, KB Extension, Davanagere.
9844261046, 8722581400

**FLAT FOR LEASE**
2 BHK, North facing 1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ವಧು-ಬೇಕಾಗಿದ್ದಾರೆ**
2ನೇ ಸಂಬಂಧಕ್ಕೆ ಹಿಂದೂ ಲಿಂಗಾಯತ ಜಾತಿಯ ವಧು ಇದ್ದಲ್ಲಿ ಸಂಪರ್ಕಿಸಿ : ಅಡುಗೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ.
80731 24002

ಶ್ರೀ ಗುರು ಮರುಳಸಿದ್ಧೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**WANTED**
Staff Nurse ANM / GNM fresher and Experience
AL-Washi Health Care
Unity Towers B.N Layout. Budihal Road, DVG. Contact No.
90080 79333


ಓಂ ಶ್ರೀ ಕೊಡಂಗಲ್ಲೂರು ಭಗವತಿದೇವಿ
**ಜ್ಯೋತಿಷ್ಯಾಲಯ**
ಪಂಡಿತ್ ಸಂತೋಷ್ ಗುರೂಜಿ
ವ್ಯಾಪಾರ, ಆರೋಗ್ಯ, ಲಗ್ನ, ಸಂತಾನ, ಮಾಟ-ಮಂತ್ರ, ಸಾಲದ ಬಾಧೆ, ಮಾನಸಿಕ ಚಿಂತೆ, ಇನ್ನೂ ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳು ಇದ್ದರೆ ಶಾಶ್ವತ ಪರಿಹಾರ. ಶತಃ ಸಿದ್ಧ.
99728 37663
ವಿಳಾಸ : ಡೆಂಟಲ್ ಕಾಲೇಜು ರಸ್ತೆ, ದಾವಣಗೆರೆ.

**ನೇರ ಪರೀಕ್ಷೆಗಳು**
SSLC , PUC
NTC - ನರ್ಸರಿ ಟೀಚರ್ಸ್ ಟ್ರೇನಿಂಗ್
BA, B.Com, MA, M.Com, MBA (ALL),
ಶ್ರೀ ಗಂಗೋತ್ರಿ ಕರಸ್ಪಾಂಡೆನ್ಸ್ ಕಾಲೇಜ್
ಮೋತಿ ಸ್ವೀಟ್ಸ್/ ಟ್ರೆಂಡ್ಸ್ ಪಕ್ಕ, ಪಿ.ಬಿ. ರಸ್ತೆ, ದಾವಣಗೆರೆ
86602 35013

**ಬೇಕಾಗಿದ್ದಾರೆ**
ಆವರಗೆರೆಯಲ್ಲಿರುವ ಶ್ರೀ ಶಂಕರಲೀಲಾ ಕಲ್ಯಾಣ ಮಂಟಪದಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ :
99164-54770

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಕಟ್ಟಡ ಬಾಡಿಗೆಗಿದೆ**
ವಾಣಿಜ್ಯೋಪಯೋಗಿ / ಕಚೇರಿ ಉಪಯೋಗಕ್ಕಾಗಿ ಸುಸಜ್ಜಿತವಾದ ಕಟ್ಟಡ ಬಾಡಿಗೆಗಿದೆ.
ಸಂಪರ್ಕಿಸಿ.
98867-34802
70222-78090

**ಹೋಟೆಲ್ ಉದ್ಯಮಕ್ಕೆ ಕೆಲಸಗಾರರು ಬೇಕಾಗಿದ್ದಾರೆ**
ಕ್ಲರ್ಕ್ಸ್ ಇನ್
ಶಾಮನೂರು ರಸ್ತೆ, ದಾವಣಗೆರೆ.
70190 51306

**WANTED**
Any Degree with Computer knowledge is must. for Male & Female.
Contact : Exllent Electronics
#2137/1, 4th Main, 3rd Cross, MCC `A' Block, Davanagere - 577004
98865 15100

**15 ಎಕರೆ ಜಮೀನು ಮಾರಾಟಕ್ಕಿದೆ**
ಕೊಂಡಜ್ಜಿ ರಸ್ತೆಗೆ @Rs. 55 Lakhs/ Acre
(Contact Buyers Only)
Sharma :
63608 66997

**SHOP FOR RENT**
Boys Hostel Road, Ist Floor Shop For Rent 7th Cross, 9th Main
82177 72482

**ಮನೆ ಬಾಡಿಗೆಗೆ ಇದೆ**
ವಿದ್ಯಾರ್ಥಿ ಭವನದ ಹತ್ತಿರ, ಸುಕೋ ಬ್ಯಾಂಕ್ ಹಿಂಭಾಗ 3BHK ಮನೆ, ವಾಸಕ್ಕೆ ಹಾಗೂ ವಾಣಿಜ್ಯ ಉಪಯೋಗಕ್ಕೆ ಬಾಡಿಗೆಗೆ ಇದೆ. ವಿಚಾರಿಸಿ.
98454 66995

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಅನುಭವವುಳ್ಳ ದೋಸೆ ಭಟ್ಟರು, ಟೀ-ಕಾಫಿ ಮಾಡುವವರು, ಸಪ್ಲೈಯರ್‌ಗಳು, ಕೌಂಟರ್ ಹುಡುಗರು, ಕ್ಲೀನರ್‌ಗಳು, ಚಾಟ್ಸ್ ಮಾಡುವವರು, ಹೆಲ್ಪರ್ ಗಳು ಬೇಕಾಗಿದ್ದಾರೆ. ಉಚಿತ ಊಟ ಮತ್ತು ವಸತಿ ಸೌಲಭ್ಯವಿದೆ.
95350 35660, 63646 64518

## ಮಲೇಬೆನ್ನೂರಿನಲ್ಲಿ ಸಂಭ್ರಮದ ಗಂಧದ ಮೆರವಣಿಗೆ



ಮಲೇಬೆನ್ನೂರು, ಫೆ.22- ಇಲ್ಲಿನ ಹಜರತ್ ಸೈಯದ್ ಹಬೀಬುಲ್ಲಾ ಷಾ ಖಾದ್ರಿ ಅವರ ಉರುಸು ಅಂಗವಾಗಿ ಬುಧವಾರ ಸಂಜೆ ಪಟ್ಟಣದಲ್ಲಿ ಗಂಧದ (ಸಂಧಲ್) ಮೆರವಣಿಗೆ ಸಂಭ್ರಮದಿಂದ ಜರುಗಿತು.

ಸಂಪ್ರದಾಯದಂತೆ ಹಿಂದೂಗಳ ಮನೆಯಲ್ಲಿ ಗಂಧಕ್ಕೆ ಪೂಜೆ ಸಲ್ಲಿಸಿದ ನಂತರ ಮುಸ್ಲಿಂ ಧರ್ಮಗುರುಗಳು ಎಲ್ಲರಿಗೂ ಸಿಹಿ ವಿತರಿಸಿದರು. ಮೆರವಣಿಗೆಯಲ್ಲಿ ಗಂಧಕ್ಕೆ ಹಿಂದೂಗಳು ಸಕ್ಕರೆ ನಿವೇದಿಸಿ ಭಕ್ತಿ ಸಮರ್ಪಿಸಿದರು. ಅಲ್ಲದೇ ಮೆರವಣಿಗೆಗೆ ಹೂವಿನ ಹಾರ ಹಾಕಿ ಸಾಮರಸ್ಯ ಮೆರೆದರು. ದರ್ಗಾದಿಂದ ಪ್ರಾರಂಭವಾದ ಮೆರವಣಿಗೆ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿತು.

# ಕನಿಷ್ಠ ಬೆಂಬಲ ಬೆಲೆ ಕಾನೂನು ಕಾಯ್ದೆ ಜಾರಿಗಾಗಿ ರಸ್ತೆ ತಡೆ, ಪ್ರತಿಭಟನೆ

ದಾವಣಗೆರೆ, ಫೆ.22- ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಕಾಯ್ದೆ ಜಾರಿ ಮಾಡಿ, ಕನಿಷ್ಠ ಬೆಲೆಗಿಂತ ಕಡಿಮೆ ಬೆಲೆಗೆ ಖರೀದಿ ಮಾಡಿದರೆ 6 ತಿಂಗಳು ಜೈಲು ಶಿಕ್ಷೆ ಆಗಬೇಕು ಮತ್ತು ಖರೀದಿದಾರನ ಪರವಾನಿಗೆ ರದ್ದು ಮಾಡಬೇಕು ಎಂಬುದೂ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗಾಗಿ ರೈತ ಸಂಘ ಮತ್ತು ಹಸಿರು ಸೇನೆ (ಹುಚ್ಚವ್ವನಹಳ್ಳಿ ಮಂಜುನಾಥ್ ಬಣ)ಯಿಂದ ನಲ್ಲೂರು ಗ್ರಾಮದಿಂದ ಸೋಮವಾರ ಆರಂಭವಾಗಿದ್ದ ಪಾದಯಾತ್ರೆ ಗುರುವಾರ ದಾವಣಗೆರೆ ತಲುಪಿತು.

ಈ ಸಂದರ್ಭದಲ್ಲಿ ಪಾದಯಾತ್ರೆ ಮೂಲಕ ಆಗಮಿಸಿದ್ದ ಪ್ರತಿಭಟನಾಕಾರರು ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ, ಜಿಲ್ಲಾಧಿಕಾರಿ ಕಛೇರಿ ಬಳಿಯ ಹೆದ್ದಾರಿ ತಡೆದು ಪ್ರತಿಭಟಿಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಡಿಸಿ ಡಾ.ಎಂ.ವಿ. ವೆಂಕಟೇಶ್, ರೈತ ಮುಖಂಡರಿಂದ ಮನವಿ ಸ್ವೀಕರಿಸಿ, ಬೇಡಿಕೆಗಳ ಈಡೇರಿಕೆಗೆ ಕ್ರಮ ವಹಿಸುವ ಆಶ್ವಾಸನೆ ನೀಡಿದರು.

ಸಾಸ್ವೆಹಳ್ಳಿ ಮತ್ತು ಕಮ್ಮಾರಘಟ್ಟೆ ಏತನೀರಾವರಿ ಯೋಜನೆ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಬೇಕು. ಚನ್ನಗಿರಿ ತಾಲ್ಲೂಕಿನಲ್ಲಿ ಗರದಕಟ್ಟೆ ಬಳಿ ಎಂ.ಪಿ.ಎಂ ಮಿಲ್ ಗೆ ನೀಡಿರುವ ಲೀಸ್ ಮುಗಿದಿದ್ದು, ಜಮೀನನ್ನು ಬಗರ್ ಹುಕ್ಕುಂ ಸಾಗುವಳಿದಾರರಿಗೆ ಹಕ್ಕು ಪತ್ರ ನೀಡಬೇಕು.





ಜಿಲ್ಲೆಯಲ್ಲಿ ಸಾವಿರಾರು ನಿವೇಶನ ರಹಿತ ಕುಟುಂಬಗಳಿಗೆ ಹಕ್ಕುಪತ್ರ ನೀಡಬೇಕು. ಜಗಳೂರು ತಾಲ್ಲುಕು 57 ಕೆರೆಗೆ ನೀರನ್ನು ತುಂಬಿಸುವ ಏತ ನೀರಾವರಿ ಯೋಜನೆಯನ್ನು ಶೀಘ್ರ ಪೂರ್ಣಗೊಳಿಸಿ, ಪ್ರತಿ ಗ್ರಾಮಕ್ಕೆ ಶುದ್ಧ ಕುಡಿಯುವ ನೀರನ್ನು ಪೂರೈಸಬೇಕು. ಬಗರ್ ಹುಕ್ಕುಂ ಅರ್ಜಿ ಸಾಗುವಳಿದಾರರಿಗೆ ಶೀಘ್ರ ಹಕ್ಕು ಪತ್ರವನ್ನು ನೀಡಬೇಕು.

ಕೃಷಿ ಭಾಗ್ಯ ಯೋಜನೆಯಲ್ಲಿ ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕನ್ನು ಸೇರ್ಪಡೆ ಮಾಡಬೇಕು. ಚನ್ನಗಿರಿ ತಾಲ್ಲೂಕಿನಲ್ಲಿ ಉಳುಮೆ ಮಾಡುತ್ತಿರುವ ರೈತರನ್ನು ಒಕ್ಕಲೆಬ್ಬಿಸುವುದನ್ನು ಕೈ ಬಿಡಬೇಕು ಎಂದು ಆಗ್ರಹಿಸಿ, ಮನವಿ ಸಲ್ಲಿಸಲಾಯಿತು.

### ನಲ್ಲೂರಿನಿಂದ ಪಾದಯಾತ್ರೆ ಬಂದು ಡಿಸಿಗೆ ಮನವಿ ಸಲ್ಲಿಕೆ

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಹುಚ್ಚವ್ವನ ಹಳ್ಳಿ ಮಂಜುನಾಥ್, ಯಲ್ಲೋದಹಳ್ಳಿ ರವಿಕುಮಾರ್ ಅಸ್ತಾಪನಹಳ್ಳಿ ಗಂಡುಗಲಿ, ಏಸುದಾಸ್, ಕೋಗಲೂರು ಕುಮಾರ್, ಉಪನಾಯಕನಹಳ್ಳಿ ಉಮೇಶ್, ಚಿಕ್ಕಮಲ್ಲನ ಹೊಳೆ ಚಿರಂಜೀವಿ, ರಾಜನಹಟ್ಟಿ ರಾಜು, ಕಾನನಕಟ್ಟೆ ತಿಪ್ಪೇಸ್ವಾಮಿ, ಕಡರನಾಯಕನಹಳ್ಳಿ ಪ್ರಭು, ಅರಕೆರೆ ನಾಗರಾಜ್, ಯರವನಾಗತಿ ಹಳ್ಳಿ ಬಾಲಾಜಿ, ಕುರ್ಕಿ ಹನುಮಂತ, ಗುಮ್ಮನೂರು ಭೀಮೇಶ್, ದ್ಯಾಮಜ್ಜಿ ಹನುಮಂತ ಸೇರಿದಂತೆ ರೈತ ಮುಖಂಡರು, ನೂರಾರು ಮಹಿಳೆಯರು ಪಾಲ್ಗೊಂಡಿದ್ದರು.

## ಮಕ್ಕಳಿಗೆ ರಾಗಿ ಮಾಲ್ಟ್ ವಿತರಣೆಗೆ ಚಾಲನೆ

ದಾವಣಗೆರೆ, ಫೆ. 22- 'ಉತ್ತಮ ಪೌಷ್ಠಿಕಾಂಶ ಉತ್ತಮ ಶಿಕ್ಷಣಕ್ಕೆ ರಹದಾರಿ' ಎಂಬ ಕಾರ್ಯಕ್ರಮದಡಿ ಶಾಲಾ ಮಕ್ಕಳಿಗೆ ರಾಗಿ ಮಾಲ್ಟ್ ವಿತರಿಸುವ ಕಾರ್ಯಕ್ರಮಕ್ಕೆ ನಗರದ ನಿಟುವಳ್ಳಿ ಸರ್ಕಾರಿ ಉನ್ನತೀಕರಿಸಿದ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಇಟ್ನಾಳ್ ಗುರುವಾರ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಅಪೌಷ್ಟಿಕತೆ ಇರುವ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದೆ. ಹೀಗಾಗಿ ಕ್ಷೀರಭಾಗ್ಯದ ಮೂಲಕ ಹಾಲು ಕೊಡಲಾಗಿತ್ತು. ನಂತರದ ದಿನಗಳಲ್ಲಿ ಮಕ್ಕಳಿಗಾಗಿ ಮೊಟ್ಟೆ, ಚಿಕ್ಕಿ, ಬಾಳೆ ಹಣ್ಣು ಕೊಡಲಾಯಿತು. ಇದೀಗ ರಾಗಿ ಮಿಕ್ಸ್ ಕೊಡಲಾಗುತ್ತಿದೆ. ಇದರಲ್ಲಿ ವಿಟಮಿನ್, ಮಿನರಲ್ ಇರಲಿದೆ. ಇದರಿಂದ ಸಮತೋಲಿತ ಆಹಾರ ಸಿಗಲು ಸಾಧ್ಯವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಡಿಡಿಪಿಐ ಜಿ.ಕೊಟ್ರೇಶ್, ಶಿಕ್ಷಣಾಧಿಕಾರಿ ದುರುಗಪ್ಪ, ಬಿಇಒ ಡಾ.ಪುಷ್ಪಲತಾ, ಎಸ್‌ಡಿಎಂಸಿ ಅಧ್ಯಕ್ಷರಾದ ಲತಾ, ಉಪನ್ಯಾಸಕ ಅಯೂರ್, ಮುಖ್ಯೋಪಾಧ್ಯಾಯರಾದ ಸುರೇಶ್, ಲೀಲಾವತಿ, ಗಣೇಶ್ ಹುಲ್ಮನಿ ಇತರರು ಉಪಸ್ಥಿತರಿದ್ದರು.



## ಹರಿಹರ : ನಾಳೆ ಹರಿಹರೇಶ್ವರ ಸ್ವಾಮಿ ಬ್ರಹ್ಮ ರಥೋತ್ಸವ



ಹರಿಹರ, ಫೆ.22- ನಗರದ ಐತಿಹಾಸಿಕ ಪ್ರಸಿದ್ಧ ಶ್ರೀ ಹರಿಹರೇಶ್ವರ ಸ್ವಾಮಿ ಬ್ರಹ್ಮ ರಥೋತ್ಸವವು ನಾಡಿದ್ದು ದಿನಾಂಕ 24 ರ ಶನಿವಾರ ಬೆಳಿಗ್ಗೆ 11.25 ಕ್ಕೆ ನಡೆಯಲಿದೆ ಎಂದು ತಹಶೀಲ್ದಾರ್ ಕೆ.ಎಂ.ಗುರುಬಸವರಾಜ ತಿಳಿಸಿದ್ದಾರೆ.

ದಿನಾಂಕ 24 ರ ಶನಿವಾರ ನಡೆಯುವ ಶ್ರೀ ಹರಿಹರೇಶ್ವರ ಬ್ರಹ್ಮ ರಥೋತ್ಸವ ನಿಮಿತ್ತವಾಗಿ ಈಗಾಗಲೇ ಶ್ರೀ ನಾರಾಯಣ ಜೋಯಿಸ್ ಅವರ ನೇತೃತ್ವದಲ್ಲಿ ನಿನ್ನೆಯಿಂದ ವಿವಿಧ ಪೂಜಾ ಕಾರ್ಯಕ್ರಮಗಳು ನಡೆಯುತ್ತಿವೆ. ದಿನಾಂಕ 25 ರಂದು ಬೆಳಗಿನ ಪೂಜೆ ಕಾರ್ಯಗಳ ನಂತರ ಸಂಜೆ 6 ಗಂಟೆಗೆ ಶ್ರೀ ಪದ್ಮಭಾಸ್ಕರ ನೃತ್ಯ ಕಲಾ ಕೇಂದ್ರ (ಧಾರವಾಡ) ತಂಡದವರಿಂದ ಭಾರತ ನಾಟ್ಯ, ಸೇರಿದಂತೆ ಹಲವಾರು ಕಾರ್ಯಕ್ರಮಗಳು ನಡೆಯುತ್ತವೆ.

## ಮಹಾದೇವಪ್ಪ ಶಾಲೆಗೆ ತಟ್ಟೆ ಕೊಡುಗೆ

ದಾವಣಗೆರೆ, ಫೆ. 22 - ನಗರದ ಸಿದ್ಧವೀರಪ್ಪ ಬಡಾವಣೆಯ ಸಾಧನಾ ಮಹಿಳಾ ಸಂಘದ ವತಿಯಿಂದ ಹಳ್ಳಿ ಮಹಾದೇವಪ್ಪ ಶಾಲೆಯ ಮಕ್ಕಳಿಗೆ ಬಿಸಿ ಊಟಕ್ಕಾಗಿ 25 ಊಟದ ತಟ್ಟೆಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಈ ಸಂದರ್ಭದಲ್ಲಿ ಸಾಧನಾ ಮಹಿಳಾ ಸಂಘದ ಅಧ್ಯಕ್ಷರಾದ ಗೀತಮ್ಮ ಷಣ್ಮುಖಯ್ಯ, ಗೌರವಾಧ್ಯಕ್ಷರಾದ ಶಶಿಕಲಾ ಈಶ್ವರಪ್ಪ, ಕಾರ್ಯದರ್ಶಿ ಮಂಗಳಾ ಸಿ.ದೊಡ್ಡಮನಿ, ಖಜಾಂಚಿ ಮಮತ ರವೀಂದ್ರ ಹಾಗೂ ಸದಸ್ಯರು ಉಪಸ್ಥಿತರಿದ್ದರು.



# ಕನ್ನಡ ನಾಡಿಗೆ, ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಶಕ್ತಿ ನೀಡಿದವರು ಕುವೆಂಪು



ದಾವಣಗೆರೆ, ಫೆ. 22- ಕೇಂದ್ರ ಸರ್ಕಾರ ಕೊಡ ಮಾಡುವ ಜ್ಞಾನಪೀಠ ಪ್ರಶಸ್ತಿ ಪ್ರಾದೇಶಿಕ ಭಾಷೆಯಾದ ಕನ್ನಡ ಭಾಷೆಗೆ ತಂದುಕೊಟ್ಟ ಮೊದಲ ಕವಿ, ಸಾಹಿತಿ ಕುವೆಂಪು ಹಾಗೂ ಕನ್ನಡ ನಾಡಿಗೆ, ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಶಕ್ತಿಯನ್ನು ನೀಡಿದರು ಎಂದು ಸಾಹಿತಿ ಗಂಗಾಧರ್ ಬಿ. ಎಲ್. ನಿಟ್ಟೂರು ತಿಳಿಸಿದರು.

ದಾವಣಗೆರೆ ತಾಲ್ಲೂಕು ಕ.ಸಾ.ಪ. ಮತ್ತು ಕಾವೇರಮ್ಮ ಪ್ರೌಢಶಾಲೆ ಹಾಗೂ ಹಿರಿಯ ನಾಗರಿಕರ ಸಹಾಯವಾಣಿ (ದಾವಣಗೆರೆ) ಇವರ ಸಹಯೋಗದಲ್ಲಿ ಏರ್ಪಡಿಸಿದ್ದ ಶಾಲಾ-ಕಾಲೇಜು ಅಂಗಳದಲ್ಲಿ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಕನ್ನಡ ಸಾಹಿತ್ಯ ಕೊಡುಗೆಗಳನ್ನು ಕುರಿತು ಅವರು ಮಾತನಾಡಿದರು.

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ನಿರ್ದೇಶಕರಾದ ಶ್ರೀಮತಿ ನಾಗವೇಣಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ ದಾವಣಗೆರೆ ತಾಲ್ಲೂಕು ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ಕನ್ನಡ ನುಡಿಯ ವೈಶಿಷ್ಟ್ಯತೆಯ ಬಗ್ಗೆ ಮಾತನಾಡಿ, ವಿದ್ಯಾರ್ಥಿಗಳಿಗೆ ಪರೀಕ್ಷಾ ಸಿದ್ಧತೆಯ ಕುರಿತು ತಿಳಿಸಿದರು.

ಹಿರಿಯ ಶಿಕ್ಷಕಿ ಶ್ರೀಮತಿ ದಿನಮಣಿ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ ನಿರ್ದೇಶಕ ಷಡಕ್ಷರಪ್ಪ ಎಂ. ಬೇತೂರು, ಶ್ರೀಮತಿ ಸೌಭಾಗ್ಯ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಕನ್ನಡ ಭಾಷಾ ಶಿಕ್ಷಕ ಪಿ.ಬಿ. ಪಂಪಾಪತಿ ನಿರೂಪಿಸಿದರು. ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಹೆಚ್.ವಿ. ಭೀಮಪ್ಪ ಸ್ವಾಗತಿಸಿದರು. ಶ್ರೀಮತಿ ಕೆ.ಎಸ್. ಮಂಗಳಗೌರಿ ವಂದಿಸಿದರು.

## ನಗರದಲ್ಲಿ 26 ರಂದು ಬೃಹತ್ ಉದ್ಯೋಗ ಮೇಳ

ದಾವಣಗೆರೆ, ಫೆ.22- ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ (ಬೆಂಗಳೂರು) ಮತ್ತು ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ಇದೇ ದಿನಾಂಕ 26 ಮತ್ತು 27 ರಂದು ರಾಜ್ಯ ಮಟ್ಟದ ಬೃಹತ್ ಉದ್ಯೋಗ ಮೇಳವನ್ನು ಬೆಂಗಳೂರಿನಲ್ಲಿ ಆಯೋಜಿಸಲಾಗಿದೆ.

ಉದ್ಯೋಗಾಕಾಂಕ್ಷಿಗಳು HYPERLINK "https://udyoga.skillconnet.kaushalkar.com/" \t "_blank" https://udyoga.skillconnet.kaushalkar.com ಲಿಂಕ್‌ನಲ್ಲಿ ನೋಂದಾಯಿಸಿಕೊಳ್ಳಬಹುದು.

ಜಿಲ್ಲೆಯ ಹೆಚ್ಚಿನ ಸಂಖ್ಯೆಯಲ್ಲಿ ವಿಕಲಚೇತನ ಉದ್ಯೋಗಾಕಾಂಕ್ಷಿಗಳು ಈ ಬೃಹತ್ ಉದ್ಯೋಗ ಮೇಳದಲ್ಲಿ ಭಾಗವಹಿಸಬೇಕೆಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ಡಾ.ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಕ್ಯಾಂಪಸ್ ಸಂದರ್ಶನ

ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂದು ಬೆಳಿಗ್ಗೆ 9 ರಿಂದ ಎಲ್ಲಾ ಪದವಿ ಮುಗಿಸಿದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಬೆಂಗಳೂರಿನ ಆಲ್‌ಸೆಕ್ ಟೆಕ್ನಾಲಜಿಸ್‌ನಿಂದ ಕ್ಯಾಂಪಸ್ ಸಂದರ್ಶನ ಏರ್ಪಡಿಸಲಾಗಿದೆ. ಟೆಕ್ನಿಕಲ್ ಅಸೋಸಿಯೇಟ್ ಮತ್ತು ಕಸ್ಟಮರ್ ಸಪೋರ್ಟ್ ರೋಲ್ (ಬ್ಯಾಂಕಿಂಗ್ ಕ್ಷೇತ್ರ) ಇಲ್ಲಿ ಅವಕಾಶವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಾಲೇಜಿನ ಕಂಪ್ಯೂಟರ್ ಸೈನ್ಸ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಪ್ರವೀಣ್ ಕುಮಾರ್ ಕೆ. (97417 26679) ಅವರನ್ನು ಸಂಪರ್ಕಿಸಬಹುದು.

## ದುಗ್ಗಮ್ಮನ ಜಾತ್ರೆ : ನಾಳೆ ಕುಸ್ತಿ ಸಭೆ



ದಾವಣಗೆರೆ, ಫೆ. 22 - ನಗರದ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆ ಪ್ರಯುಕ್ತ ಬರುವ ಮಾರ್ಚ್ 22, 23, 24ರಂದು 3 ದಿವಸಗಳ ಕಾಲ ಕುಸ್ತಿ ಪಂದ್ಯ ನಡೆಯಲಿದೆ. ಯಾವ ರೀತಿ ಕುಸ್ತಿ ನಡೆಸಬೇಕೆಂಬ ಬಗ್ಗೆ ಕುಸ್ತಿ ಕಮಿಟಿಯ ಅಧ್ಯಕ್ಷ ಹೆಚ್.ಬಿ. ಗೋಣೆಪ್ಪ ಅವರ ಅಧ್ಯಕ್ಷತೆಯಲ್ಲಿ ದೇವಸ್ಥಾನದ ಮುಂಭಾಗದಲ್ಲಿರುವ ಪ್ರಸಾದ ನಿಲಯದಲ್ಲಿ ಪೂರ್ವಭಾವಿ ಸಭೆಯನ್ನು ನಾಡಿದ್ದು ದಿನಾಂಕ 24 ರ ಶನಿವಾರ ಬೆಳಿಗ್ಗೆ 11.30ಕ್ಕೆ ಕರೆಯಲಾಗಿದೆ ಎಂದು ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನ ಕುಸ್ತಿ ಸಮಿತಿ ಪರವಾಗಿ ಧರ್ಮದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

# ಆವರಗೆರೆಯಲ್ಲಿ ನಿವೇಶನಗಳ ಅಕ್ರಮ ಡೋರ್ ನಂಬರ್ ರದ್ದು

ದಾವಣಗೆರೆ, ಫೆ. 22 - ಮಹಾನಗರ ಪಾಲಿಕೆ ವ್ಯಾಪ್ತಿಯ 32ನೇ ವಾರ್ಡಿನಲ್ಲಿ ಆವರಗೆರೆ ಸರ್ವೆ ನಂಬರ್ 242 ಮತ್ತು 243 ಮತ್ತು 244ರ ಉಪ ನಂಬರ್ ಗಳಲ್ಲಿ ದಾವಣಗೆರೆ ಹರಿಹರ-ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಂತಿಮ ಮಂಜೂರಾತಿ ಪಡೆದಿದ್ದ, ಬಡಾವಣೆ ನಕ್ಷೆಗಳಲ್ಲಿ ಬಿಟ್ಟಿದ್ದ ಸುಮಾರು 34 ಸಾವಿರ ಅಡಿ ಬಯಲು ಜಾಗಕ್ಕೆ ಮಹಾನಗರ ಪಾಲಿಕೆಯ ಕೆಲವು ಅಧಿಕಾರಿಗಳು ಶಾಮೀಲಾಗಿ 2017 ಮತ್ತು 2018 ರಲ್ಲಿ ನೀಡಲಾಗಿದ್ದ ಅಕ್ರಮ ನಿವೇಶನ ಸಂಖ್ಯೆಗಳನ್ನು ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ಅವರು ಡಿಸೆಂಬರ್ 7ರಂದು ರದ್ದುಪಡಿಸಿ ಆದೇಶ ಮಾಡಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ 32ನೇ ವಾರ್ಡಿನ ಮಹಾನಗರ ಪಾಲಿಕೆ ಸದಸ್ಯರೂ, ಮಾಜಿ ಮಹಾಪೌರರೂ ಆದ ಶ್ರೀಮತಿ ಉಮಾ ಪ್ರಕಾಶ್ ಅವರು 2019ರಲ್ಲಿ ಎರಡನೇ ಬಾರಿ ಮಹಾನಗರ ಪಾಲಿಕೆ ಸದಸ್ಯರಾಗಿ ಆಯ್ಕೆಯಾದ ನಂತರ ಮೊದಲ ಸಾಮಾನ್ಯ ಸಭೆಯಿಂದ ಪ್ರತಿ ಸಭೆಯಲ್ಲಿ ಈ ಬಗ್ಗೆ ಪ್ರಸ್ತಾಪಿಸಿ ರದ್ದುಪಡಿಸಲು ಹೋರಾಟ ಮಾಡಿದ್ದರ ಪ್ರತಿಫಲ ಎಂದು ಹೇಳಿದ್ದಾರೆ.

ರದ್ದುಪಡಿಸುವ ಕ್ರಮ ಕೈಗೊಳ್ಳುವಲ್ಲಿ ಉಪಯುಕ್ತರಾದ ಶ್ರೀಮತಿ ಲಕ್ಷ್ಮಿ, ಸಹಾಯಕ ಕಂದಾಯ ಅಧಿಕಾರಿ ಸುನಿಲ್ ಮತ್ತು ಇತರೆ ಅಧಿಕಾರಿಗಳು ಪರಿಶೀಲಿಸಿ ಅಕ್ರಮ ಡೋರ್ ನಂಬರ್ ನೀಡಿರುವುದನ್ನು ರದ್ದುಪಡಿಸಲು ಕ್ರಮ ಕೈಗೊಳ್ಳುವಂತೆ ಆಯುಕ್ತರಿಗೆ ವರದಿ ನೀಡಿ ನಂತರ ಬೆಂಗಳೂರು ವಿಭಾಗೀಯ ಆಯುಕ್ತರ ಸೂಚನೆಯಂತೆ ಸದರಿ ಅಕ್ರಮ ಡೋರ್ ನಂಬರ್ ಗಳನ್ನು ರದ್ದುಪಡಿಸಲು ಕ್ರಮ ಕೈಗೊಂಡಿರುತ್ತಾರೆ. ರದ್ದುಪಡಿಸಲು ಕ್ರಮ ಕೈಗೊಂಡ ಅಧಿಕಾರಿ ವರ್ಗಕ್ಕೆ ಆಯುಕ್ತರು ಮತ್ತು ಉಪ ಆಯುಕ್ತರಿಗೆ ಈ ಮೂಲಕ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಹೇಳಿದ್ದಾರೆ.

ಸದರಿ ಡೋರ್ ನಂಬರ್ ರದ್ದುಪಡಿಸಿರುವ ಜಾಗದಲ್ಲಿ ಫೆನ್ಸಿಂಗ್ ಅಳವಡಿಸಿ ಸಾರ್ವಜನಿಕ ಸ್ವತ್ತನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳಲು ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಉದ್ಯಾನವನ ಅಥವಾ ಆಟದ ಮೈದಾನಕ್ಕೆ ಅನುಕೂಲ ಮಾಡಿಕೊಡಲು ಮತ್ತು ಅಕ್ರಮ ಡೋರ್ ನಂಬರ್ ನೀಡಿರುವಂತಹ ಪಾಲಿಕೆಯ ನೌಕರರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ಮುಂದಿನ ವಾರ ನಡೆಯಲಿರುವ ಸಾಮಾನ್ಯ ಸಭೆಯಲ್ಲಿ ಪ್ರಸ್ತಾಪ ಮಾಡುವುದಾಗಿ ಹೇಳಿದ್ದಾರೆ.



**ಸತತ ಹೋರಾಟಕ್ಕೆ ಸಿಕ್ಕ ಪ್ರತಿಫಲ - ಉಮಾ ಪ್ರಕಾಶ್, ಸದಸ್ಯರು, ಮಹಾನಗರ ಪಾಲಿಕೆ**


ಸದರಿ ಅಕ್ರಮ ನಿವೇಶನಗಳಲ್ಲಿ ಬಡಾವಣೆ ನಿರ್ಮಿಸಿದ ಮಾಲೀಕರು ಕೆಲವರಿಗೆ ಮಾರಾಟ ಮಾಡಿ ಮೋಸ ಮಾಡಿರುವುದು ತಿಳಿದು ಬಂದಿದೆ. ಮತ್ತು ಎರಡು ಮೂರು ಮನೆಗಳನ್ನು ನಿರ್ಮಿಸಿ ಮಾರಾಟ ಮಾಡಿರುವುದು ಸಹ ತಿಳಿದುಬಂದಿದೆ.

32ನೇ ವಾರ್ಡಿನ ಅಂಬಿಕಾ ಬಡಾವಣೆಯಲ್ಲಿಯೂ ಸಹ ಬಯಲು ಜಾಗಕ್ಕೆ ಮತ್ತು ಸಾರ್ವಜನಿಕ ಸೌಲಭ್ಯಕ್ಕೆ ಬಿಟ್ಟಿದ್ದ ಸುಮಾರು 40 ಸಾವಿರ ಅಡಿಗಳಷ್ಟು ಜಾಗಗಳಿಗೂ ಸಹ ಅಕ್ರಮ ಡೋರ್ ನಂಬರ್ ನೀಡಿರುವುದನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲು ಒತ್ತಾಯಿಸುವುದಾಗಿ ತಿಳಿಸಿದ್ದಾರೆ.

ಅಲ್ಲದೆ ಶಕ್ತಿನಗರದ ಹತ್ತಿರ ಬನಶಂಕರಿ ದೇವಸ್ಥಾನದ ಎಡಭಾಗದಲ್ಲಿ ಡಿಸಿಎಂ ಟೌನ್ ಶಿಪ್ ನ ದಕ್ಷಿಣ ಭಾಗಕ್ಕೆ ಸುಮಾರು 30 ಅಡಿ ರಸ್ತೆ ಇದ್ದು, ಸದರಿ ರಸ್ತೆಯನ್ನು ಒತ್ತುವರಿ ಮಾಡಿ ಮನೆ ನಿರ್ಮಿಸಿ ಮಾರಾಟ ಮಾಡಿರುವುದು ತಿಳಿದು ಬಂದಿರುತ್ತದೆ. ಸದರಿ ಡಿಸಿಎಂ ಟೌನ್ ಶಿಪ್‌ನ ದಕ್ಷಿಣ ಭಾಗದಲ್ಲಿ ಬಿಟ್ಟಿರುವ 30ಅಡಿ ರಸ್ತೆಯನ್ನು ವತ್ತುವರಿ ಮಾಡಿರುವುದನ್ನು ತೆರವುಗೊಳಿಸಲು ಒತ್ತಾಯಿಸುವುದಾಗಿ ತಿಳಿಸಿದ್ದಾರೆ. ಅಕ್ರಮ ಡೋರ್ ನಂಬರ್‌ಗಳು ಸೇರಿದಂತೆ ಸಾರ್ವಜನಿಕ ಸ್ವತ್ತು ಒತ್ತುವರಿ, ಉದ್ಯಾನವನ ಒತ್ತುವರಿ, ರಸ್ತೆ ಒತ್ತುವರಿಗೆ ಸಂಬಂಧಿಸಿದಂತೆ ತನ್ನ ಹೋರಾಟ ಮುಂದುವರಿಯುತ್ತದೆ ಎಂದು ಉಮಾ ಹೇಳಿದ್ದಾರೆ.

ಸಾರ್ವಜನಿಕರು ನಿವೇಶನ ಕೊಳ್ಳುವಾಗ ಆ ನಿವೇಶನಗಳು ನಗರ ಅಭಿವೃದ್ಧಿ ಪ್ರಾಧಿಕಾರದಿಂದ ಅನಿಮೋದನೆಯಾಗಿ ಮಹಾನಗರ ಪಾಲಿಕೆಯಿಂದ ಡೋರ್ ನಂಬರ್ ಪಡೆದಿವೆಯೇ ಎಂಬುದನ್ನು ಪರಿಶೀಲಿಸಿ ನಿವೇಶನ ಕೊಳ್ಳಲು ಸಾರ್ವಜನಿಕರಲ್ಲಿ ಅವರು ಮನವಿ ಮಾಡಿದ್ದಾರೆ.


# ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಅಂಡ್ ರೀಸರ್ಚ್‌ಗೆ 9 ರ್‍ಯಾಂಕ್‌ಗಳು



ದಾವಣಗೆರೆ, ಫೆ. 22- ದಾವಣಗೆರೆ ವಿವಿ ಎಂ.ಬಿ.ಎ. ಸ್ನಾತಕೋತ್ತರ ಪರೀಕ್ಷೆಯಲ್ಲಿ ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಅಂಡ್ ರೀಸರ್ಚ್ (BAMR) ವಿದ್ಯಾರ್ಥಿಗಳು 9 ರ್‍ಯಾಂಕ್‌ಗಳನ್ನು ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಶಾಜಿಯಾ (1ನೇ ರ್‍ಯಾಂಕ್), ಶಿವಾನಂದ್ ಬರಾಡಿ (2ನೇ ರ್‍ಯಾಂಕ್), ಬಿ. ಪ್ರಿಯಾ, ಭಾರ್ಗವಿ ಎಸ್. ಇನಾಂದಾರ್ (3ನೇ ರ್‍ಯಾಂಕ್), ಹೆಚ್.ಎಂ. ಮುಸ್ಕಾನ್ (4ನೇ ರ್‍ಯಾಂಕ್), ತೇಜಸ್ವಿನಿ ಐರಣಿ (5ನೇ ರ್‍ಯಾಂಕ್), ಹೆಚ್. ಪಲ್ಲವಿ (6ನೇ ರ್‍ಯಾಂಕ್), ಶಿರಿಶಾ ವಿ. (7ನೇ ರ್‍ಯಾಂಕ್), ತಸ್ಮಿಯಾ ಬಾನು (10ನೇ ರ್‍ಯಾಂಕ್) ಅವರಿಗೆ ಬಾಪೂಜಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ, ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಬಾಪೂಜಿ ವಿದ್ಯಾಸಂಸ್ಥೆಯ ಜಂಟಿ ಕಾರ್ಯದರ್ಶಿ ಹಾಗೂ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಬಾಪೂಜಿ ಬಿ ಸ್ಕೂಲ್ಸ್ ಅಧ್ಯಕ್ಷ ಡಾ. ಅಥಣಿ ಎಸ್. ವೀರಣ್ಣ, ನಿರ್ದೇಶಕ ಡಾ. ಸ್ವಾಮಿ ತ್ರಿಭುವಾನಂದ ಹೆಚ್.ವಿ. ಹಾಗೂ ಬೋಧಕ, ಬೋಧಕೇತರ ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

## ನಗರದಲ್ಲಿ ಇಂದು ಸಿದ್ಧ ಕಣ್ಣಿನ ಹನಿ



ವಿದ್ಯಾನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇಂದು ಬೆಳಿಗ್ಗೆ 10 ರಿಂದ 12 ರವರೆಗೆ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ. ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸಬಹುದು.

ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ, ಬಿ.ಎಸ್. ವೀರೇಶ್ (88676 - 91155), ಎನ್.ಎಂ. ತಿಪ್ಪೇಸ್ವಾಮಿ (98868-74078), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42713), ಎಂ.ಆರ್.ಅಶೋಕ್ ಕುಮಾರ್ (95917 76643) ಅವರನ್ನು ಸಂಪರ್ಕಿಸಬಹುದು.

## ಶರಣ ಸಾಹಿತ್ಯ ಪರಿಷತ್ತಿನಿಂದ ನಗರದಲ್ಲಿಂದು ದತ್ತಿ ಕಾರ್ಯಕ್ರಮ

ದಾವಣಗೆರೆ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಎಂ.ಎಂ ಕಾಲೇಜಿನಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ದತ್ತಿ ಕಾರ್ಯಕ್ರಮ ನಡೆಯಲಿದೆ. ಡಾ. ಕೆ.ಟಿ. ನಾಗರಾಜಯ್ಯ ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ಅಧ್ಯಕ್ಷತೆ ವಹಿಸುವರು. ಡಾ. ನಾ. ಲೋಕೇಶ್ ಒಡೆಯರ್, ಜಿ.ಎಂ. ಕುಮಾರಪ್ಪ ದತ್ತಿ ದಾನಿಗಳ ಪರಿಚಯಿಸುವರು. ಪ್ರಮೀಳಾ ನಟರಾಜ್, ಎಂ. ಪರಮೇಶ್ವರಪ್ಪ, ಎಸ್.ಬಿ. ರುದ್ರಗೌಡ ಗೌರವ ಉಪಸ್ಥಿತರಿರುವರು. ಎಂ. ನೀಲಾಂಬಿಕೆ, ಡಾ. ಎಂ. ಈಶ್ವರಮ್ಮ ಹಾಗೂ ಮಕ್ಕಳು ದತ್ತಿ ದಾನಿಗಳಾಗಿರುವರು.

## ನೇಕಾರ ಸಮುದಾಯ : ಪ್ರತಿಭಟನೆ

ಜಯದೇವ ವೃತ್ತದಿಂದ ಉಪವಿಭಾಗಾಧಿಕಾರಿಗಳ ಕಚೇರಿಯವರೆಗೆ ನೇಕಾರ ಸಮುದಾಯಗಳ ಒಕ್ಕೂಟದ ಜಿಲ್ಲಾ ಘಟಕದ ವತಿಯಿಂದ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಇಂದು ಬೆಳಿಗ್ಗೆ 11.30ಕ್ಕೆ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಈ ಪ್ರತಿಭಟನೆಯ ನೇತೃತ್ವವನ್ನು ಜಿಲ್ಲಾ ನೇಕಾರ ಸಮುದಾಯ ಒಕ್ಕೂಟದ ಗೌರವಾಧ್ಯಕ್ಷ ಡಿ. ಬಸವರಾಜ್ ಗುಬ್ಬಿ ವಹಿಸುವರು.



# ಶತಮಾನದ ವಿದ್ಯುತ್ ಬಿಲ್ ಬಾಕಿ ಇದೆ ಎಂದ ಅಧಿಕಾರಿಗಳು !

**ಅನಾಥಾಶ್ರಮದ ಮಕ್ಕಳಿಗೆ ಊಟದ ವ್ಯವಸ್ಥೆ ಮಾಡುವ ಶಿಕ್ಷೆ**

ಲಖ್ನೌ, ಫೆ. 22 – ಶತಮಾನಕ್ಕೂ ಹೆಚ್ಚು ಕಾಲದಿಂದ ವಿದ್ಯುತ್ ಬಾಕಿ ಇದೆ ಎಂದು ಉತ್ಪ್ರೇಕ್ಷಿತ ಬಿಲ್ ಕಳಿಸಿದ 4 ಅಧಿಕಾರಿಗಳು, ಶಿಕ್ಷೆಯ ರೂಪವಾಗಿ ಅನಾಥಾಶ್ರಮದ ಮಕ್ಕಳಿಗೆ ಊಟದ ವ್ಯವಸ್ಥೆ ಮಾಡಬೇಕು ಎಂದು ತಿಳಿಸಲಾಗಿದೆ.

ಉತ್ತರ ಪ್ರದೇಶ ವಿದ್ಯುತ್ ನಿಗಮದ ಅಧಿಕಾರಿಗಳು ತಪ್ಪಿತಸ್ಥರು ಎಂದು ರಾಜ್ಯ ಮಾಹಿತಿ ಆಯೋಗ ತಿಳಿಸಿದೆ.

ವಾರಣಾಸಿಯ ನಿವಾಸಿ ಉಮಾಶಂಕರ್ ಯಾದವ್ ಅವರು ರೂ.2.24 ಲಕ್ಷ ವಿದ್ಯುತ್ ಬಿಲ್ ಪಾವತಿಸಬೇಕು. ಅವರ ತಂದೆ ಬಸಂತ ಯಾದವ್ 1911ರಲ್ಲಿ ವಿದ್ಯುತ್ ಸಂಪರ್ಕ ಪಡೆದಿದ್ದರು. ಅಂದಿನಿಂದಲೂ ವಿದ್ಯುತ್ ಬಿಲ್ ಬಾಕಿ ಇದೆ ಎಂದು ತಿಳಿಸಲಾಗಿತ್ತು.

ಉಮಾಶಂಕರ್ ಇದನ್ನು ಪ್ರಶ್ನಿಸಿದ್ದರು. ಆದರೆ, ಯಾವುದೇ ಪರಿಹಾರ ದೊರೆತಿರಲಿಲ್ಲ. ಕೊನೆಗೆ ಮಾಹಿತಿ ಹಕ್ಕು ಅರ್ಜಿ ದಾಖಲಿಸಿದರು. ಆಗಲೂ ಸಮರ್ಪಕ ಮಾಹಿತಿ ಸಿಗದೇ ಇದ್ದಾಗ ಉನ್ನತ ಅಧಿಕಾರಿಗಳ ಮೊರೆ ಹೋದರು.

ಏಪ್ರಿಲ್ 2023ರಲ್ಲಿ ಅವರು ರಾಜ್ಯ ಮಾಹಿತಿ ಆಯೋಗಕ್ಕೆ ಅರ್ಜಿ ದಾಖಲಿಸಿದರು. ವಿದ್ಯುತ್ ನಿಗಮ 1911ರಲ್ಲಿ ಅಸ್ತಿತ್ವದಲ್ಲಿ ಇತ್ತೇ? ಆ ಸಮಯದಲ್ಲಿ ವಾರಣಾಸಿ ಜನರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿತ್ತೇ? ಪ್ರತಿ ಯುನಿಟ್ ವಿದ್ಯುತ್ ವೆಚ್ಚ ಎಷ್ಟು? ವಿದ್ಯುತ್ ವೆಚ್ಚ ಯಾವ ರೀತಿ ಲೆಕ್ಕ ಹಾಕಲಾಗುತ್ತದೆ? ಆ ಸಂದರ್ಭದಲ್ಲಿ ವಿದ್ಯುತ್ ಪೂರೈಸುತ್ತಿದ್ದ ಕಂಪನಿಯ ಹೆಸರೇನು? ಎಂಬಿತ್ಯಾದಿ ಪ್ರಶ್ನೆಗಳನ್ನು ಅರ್ಜಿದಾರರು ಕೇಳಿದ್ದರು. ಆಯೋಗ ಈ ವಿಷಯದ ವಿಚಾರಣೆ ನಡೆಸಿತು.

ವಿದ್ಯುತ್ ನಿಗಮದ ನಾಲ್ವರು ಅಧಿಕಾರಿಗಳು ತಪ್ಪು ಮಾಡಿದ್ದು ಕಂಡು ಬಂದಿದೆ. ಇವರು ವಾರಣಾಸಿಯ ಎರಡು ಅನಾಥಾಶ್ರಮಗಳಲ್ಲಿ ಊಟದ ವ್ಯವಸ್ಥೆ ಮಾಡಬೇಕು ಎಂದು ರಾಜ್ಯ ಮಾಹಿತಿ ಆಯುಕ್ತ ಅಜಯ್ ಕುಮಾರ್ ಉಪ್ರೇಟಿ ತಿಳಿಸಿದ್ದಾರೆ. ಈ ಅಧಿಕಾರಿಗಳು ಹಲವು ಬಾರಿ ಸಮನ್ಸ್ ಕಳಿಸಿದರೂ ಹಾಜರಾಗಲಿಲ್ಲ. ನಂತರದಲ್ಲಿ ಆಯೋಗದ ಎದುರು ಹಾಜರಾಗಿ ತಪ್ಪಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ನಂತರ ಬಿಲ್ ಮೊತ್ತವನ್ನು 3,998 ರೂ.ಗಳಿಗೆ ಇಳಿಸಲಾಗಿದೆ.

ಅಧಿಕಾರಿಗಳು ತಮ್ಮ ತಪ್ಪು ಒಪ್ಪಿಕೊಂಡಿದ್ದಾರೆ. ಸಾಂಕೇತಿಕ ಶಿಕ್ಷೆಯಾಗಿ ಅವರು ವಾರಣಾಸಿಯ ಎರಡು ಅನಾಥಾಶ್ರಮಗಳಿಗೆ ಊಟದ ವ್ಯವಸ್ಥೆ ಮಾಡಬೇಕು. ಪ್ರತಿ ಪ್ರಕರಣದಲ್ಲಿ ಈ ವೆಚ್ಚ 25 ಸಾವಿರ ರೂ. ದಾಟಬಾರದು ಎಂದು ತಿಳಿಸಲಾಗಿದೆ.

# ಕಾಶ್ಮೀರ ಮಾಜಿ ರಾಜ್ಯಪಾಲ ಮಲಿಕ್ ನಿವಾಸದ ಮೇಲೆ ಸಿ.ಬಿ.ಐ. ದಾಳಿ

ನವದೆಹಲಿ, ಫೆ. 22 – ಕಿರು ಜಲವಿದ್ಯುತ್ ಯೋಜನೆಯಲ್ಲಿ 2,200 ಕೋಟಿ ರೂ.ಗಳ ಭ್ರಷ್ಟಾಚಾರ ನಡೆದ ಆರೋಪಕ್ಕೆ ಸಂಬಂಧಿಸಿದಂತೆ ಜಮ್ಮು ಮತ್ತು ಕಾಶ್ಮೀರದ ಮಾಜಿ ರಾಜ್ಯಪಾಲ ಸತ್ಯ ಪಾಲ್ ಮಲಿಕ್ ತಾಣಗಳ ಮೇಲೆ ಸಿ.ಬಿ.ಐ. ದಾಳಿ ನಡೆಸಿದೆ.

ದೆಹಲಿ, ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ಹರಿಯಾಣ, ಉತ್ತರ ಪ್ರದೇಶ, ಬಿಹಾರ, ರಾಜಸ್ಥಾನ ಹಾಗೂ ಮಹಾರಾಷ್ಟ್ರಗಳ 30 ತಾಣಗಳ ಮೇಲೆ ದಾಳಿ ನಡೆಸಲಾಗಿದೆ.

ಮಲಿಕ್ ನಿಕಟವರ್ತಿ ಎನ್ನಲಾದ ಚಿನಾಬ್ ಕಣಿವೆ ವಿದ್ಯುತ್ ಕಂಪನಿಯ ಮಾಜಿ ಅಧ್ಯಕ್ಷ ನವೀನ್ ಕುಮಾರ್ ಚೌಧರಿ ಹಾಗೂ ಪಟೇಲ್ ಇಂಜಿನಿಯರಿಂಗ್ ಕಂಪನಿಯ ಅಧಿಕಾರಿಗಳ ತಾಣಗಳ ಮೇಲೆ ದಾಳಿ ನಡೆಸಲಾಗಿದೆ.

2018-19ರ ಅವಧಿಯಲ್ಲಿ ಮಲಿಕ್ ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲರಾಗಿದ್ದರು. ಕಿರು ಜಲ ವಿದ್ಯುತ್ ಯೋಜನೆಗೆ ಸಂಬಂಧಿಸಿದಂತೆ ಗುತ್ತಿಗೆ ನೀಡಲಾಗಿತ್ತು. ಈ ಗುತ್ತಿಗೆಗೆ ಸಂಬಂಧಿಸಿದ ಎರಡು ಕಡತಗಳಿಗೆ ಸಮ್ಮತಿಸಲು ತಮಗೆ 300 ಕೋಟಿ ರೂ.ಗಳ ಲಂಚದ ಪ್ರಸ್ತಾಪ ನೀಡಲಾಗಿತ್ತು ಎಂದು ಮಲಿಕ್ ಹೇಳಿದ್ದರು.

# ತರಳಬಾಳು ಹುಣ್ಣಿಮೆ ಭಕ್ತಿ, ಶಕ್ತಿ, ವೈರಾಗ್ಯಗಳ ಸಂಗಮ



(1ನೇ ಪುಟದಿಂದ) ರೂಢಿಸಿಕೊಳ್ಳಲಿ. ಯುವ ಪೀಳಿಗೆಯು ಶರಣ ತತ್ವಗಳನ್ನು ರೂಪಿಸಿಕೊಂಡು ಅನುಭಾವ ಮಂಟಪವನ್ನು ಮರು ಸ್ಥಾಪಿಸಿ ಇತರರಿಗೆ ಆದರ್ಶಪ್ರಾಯವಾಗಲಿ ಎಂದವರು ಕರೆ ನೀಡಿದರು.

ಈ ಬಾರಿಯ ತರಳಬಾಳು ಹುಣ್ಣಿಮೆಯು ಭರಮಸಾಗರದಲ್ಲಿ ನಡೆಯಬೇಕಿತ್ತು. ಬರಗಾಲದ ಪ್ರಯುಕ್ತ ಸಿರಿಗೆರೆಯಲ್ಲಿ ಸರಳ – ಸಂಪ್ರದಾಯವಾಗಿ ಆಚರಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಮಳೆ ಬೆಳೆ ಸಮೃದ್ಧವಾಗಿ ಎಲ್ಲರ ಮುಖದಲ್ಲಿ ಸಂತೋಷ ಮೂಡಲಿ ಎಂದವರು ಹಾರೈಸಿದರು.

ಹಂಪಿ ವಿಶ್ವವಿದ್ಯಾಲಯದ ಕುಲಪತಿ ಡಿ.ವಿ. ಪರಶಿವಮೂರ್ತಿ ಅವರು ಯುವ ಚಿಂತನ ಗೋಷ್ಠಿಯಲ್ಲಿ ಮಾತನಾಡಿ, ಸ್ಪರ್ಧಾ ಯುಗವೆಂದು ಬೇರೆಯವರನ್ನು ತುಳಿದು ಮುಂದೆ ಸಾಗುವ ಗುಣ ಹೊಂದಬಾರದು. ಯುವ ಪೀಳಿಗೆಯಲ್ಲಿ ಜೀವನ ಪ್ರೀತಿ ಬೇಕಿದೆ. ನೆರೆ ಹೊರೆಯವರನ್ನು ಪ್ರೀತಿಸಬೇಕಿದೆ ಎಂದರು.

ಆಹಾರ ಇಲಾಖೆಯ ಉಪ ನಿರ್ದೇಶಕ ಆರ್. ಜಿ. ಮುಕುಂದ ಸ್ವಾಮಿ ಮಾತನಾಡಿ, 2011ರ ತಂಡದಲ್ಲಿ ಅಸಿಸ್ಟೆಂಟ್ ಕಮೀಷನರ್ ಆಗಿ ಆಯ್ಕೆಯಾಗಿದ್ದರೂ ತಾಂತ್ರಿಕ ಸಮಸ್ಯೆಗಳಿಂದಾಗಿ ನೇಮಕವಾಗಿರಲಿಲ್ಲ. ನನ್ನಂತೆಯೇ 362 ಜನರು ಸಮಸ್ಯೆಗೆ ಸಿಲುಕಿದ್ದರು. ತರಳಬಾಳು ಜಗದ್ಗುರುಗಳು ಸೂಕ್ತ ಮಾರ್ಗದರ್ಶನ ಹಾಗೂ ನೆರವು ನೀಡಿ ನಮಗೆಲ್ಲ ಉದ್ಯೋಗ ಸಿಗುವಂತೆ ಮಾಡಿದರು ಎಂದರು.

ಶ್ರೀಗಳ ಪ್ರಯತ್ನದಿಂದಾಗಿ ವಿಧಾನಸಭೆಯಲ್ಲಿ ನಿರ್ಣಯ ಕೈಗೊಂಡು, ನೇಮಕಾತಿಗೆ ಇದ್ದ ಸಮಸ್ಯೆಗಳನ್ನು ಬಗೆಹರಿಸಲಾಯಿತು. ಈ ರೀತಿ ನೇಮಕಗೊಂಡವರಲ್ಲಿ 250ಕ್ಕೂ ಹೆಚ್ಚು ಜನರು ಈಗ ಅಧಿಕಾರಿಗಳಾಗಿದ್ದೇವೆ. ವೈಯಕ್ತಿಕವಾಗಿ ಕೊನೆಯವರೆಗೂ ನಾವು ಶ್ರೀಗಳಿಗೆ ಹಾಗೂ ಮಠಕ್ಕೆ ಋಣಿಗಳಾಗಿರುತ್ತೇವೆ ಎಂದರು.

ಅಮೆರಿಕದ ಶಿಕಾಗೋದ ಅಣ್ಣಾಪುರ ಶಿವಕುಮಾರ್ ಮಾತನಾಡಿ, ಕನ್ನಡ ಸಿರಿವಂತಿಕೆ ಅಪಾರವಾಗಿದ್ದರೂ ಬಳಕೆಗೆ ಬರಗಾಲ ಬಂದಿದೆ. ನಾವು ಜನಿಸಿದ ನಾಡಿನ ಭಾಷೆ ಬಳಸಲು ಹಿಂಜರಿಕೆ ಬೇಕಿಲ್ಲ ಎಂದರು.

ವಿಜಯಪುರದ ಜ್ಞಾನಯೋಗಾಶ್ರಮದ ಅಧ್ಯಕ್ಷ ಶ್ರೀ ಬಸವಲಿಂಗ ಸ್ವಾಮೀಜಿ ಮಾತನಾಡಿ, ದೇವರು ನಮಗೆ ವಿದ್ಯೆ, ಶಕ್ತಿ, ಬುದ್ಧಿ, ಯುಕ್ತಿ ಎಲ್ಲವನ್ನೂ ಕೊಟ್ಟಿದ್ದಾನೆ. ಇದನ್ನು ಸಮಾಜ, ಧರ್ಮ ಹಾಗೂ ದೇಶ ಸೇವೆಗೆ ಬಳಸಬೇಕಿದೆ ಎಂದರು.

ಶಾಲೆಯಿಂದ ಕಲಿತ ವಿದ್ಯೆ, ಪಾಲಕರ ಶ್ರಮ, ಗುರುಗಳ ಮಾರ್ಗದರ್ಶನವು ಸ್ವಾರ್ಥ ಬುದ್ಧಿಯಿಂದ ನಾಶವಾಗುತ್ತದೆ. ಪೋಷಕರೂ ಸಹ ಮಕ್ಕಳಿಗೆ ಮಾನವೀಯ ಗುಣಗಳನ್ನು ಕಲಿಸಬೇಕು ಎಂದು ಕಿವಿಮಾತು ಹೇಳಿದರು.

ವೇದಿಕೆಯ ಮೇಲೆ ಹಾಸ್ಯ ಭಾಷಣಕಾರ ಗಂಗಾವತಿ ಪ್ರಾಣೇಶ್, ಸಾಧು ಸದ್ಧರ್ಮ ವೀರಶೈವ ಸಂಘದ ಅಧ್ಯಕ್ಷ ಹೆಚ್.ಆರ್. ಬಸವರಾಜಪ್ಪ, ಸಮರ್ಥ್ ಶಾಮನೂರು, ಅನುಷಾ ಕೆ. ಹಿರೇಮಠ, ಸಾಹಿತಿಗಳಾದ ಡಿ. ಪ್ರಸನ್ನಕುಮಾರ್, ಪುಷ್ಪ ಬಣಕಾರ್, ವೀರಣ್ಣ ರಾಜೂರ ಹಾಗೂ ಕಾಶಿ ಸೋಮಾರಾಧ್ಯ ಮತ್ತಿತರರು ಉಪಸ್ಥಿತರಿದ್ದರು.

## ಯುವ ಶಕ್ತಿಗೆ ಮಾರ್ಗದರ್ಶನ ಬೇಕಿದೆ : ತರಳಬಾಳು ಜಗದ್ಗುರು



ಸಿರಿಗೆರೆ, ಫೆ. 22 – ಯುವ ಪೀಳಿಗೆಯಲ್ಲಿ ಅದ್ಭುತವಾದ ಶಕ್ತಿ ಇದೆ. ಅದನ್ನು ಸರಿಯಾಗಿ ಬಳಸಿಕೊಳ್ಳಲು ಮಾರ್ಗದರ್ಶನದ ಅಗತ್ಯವಿದೆ ಎಂದು ತರಳಬಾಳು ಜಗುದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯ ಪಟ್ಟರು.

ಚಿತ್ರದುರ್ಗ ಜಿಲ್ಲೆಯ ಸಿರಿಗೆರೆಯ ತರಳಬಾಳು ಮಠದಲ್ಲಿ ಆಯೋಜಿಸಲಾಗಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ಮೊದಲ ದಿನದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಯುವ ಪೀಳಿಗೆಯಲ್ಲಿ ಜಲ ರಾಶಿಯಲ್ಲಿರುವಂತಹ ಅದ್ಭುತವಾದ ಶಕ್ತಿ ಇದೆ. ಈ ಶಕ್ತಿಯನ್ನು ಅಣೆಕಟ್ಟೆಯಲ್ಲಿ ಹಿಡಿದಿಟ್ಟು ಸಮರ್ಪಕವಾಗಿ ಬಳಸಿದರೆ ಉತ್ತಮ ಬೆಳೆ ಸಿಗುತ್ತದೆ. ಹಾಗೆಯೇ ಹರಿ ಬಿಟ್ಟರೆ ಸಮುದ್ರಕ್ಕೆ ಸೇರಿ ಉಪ್ಪು ನೀರಾಗುತ್ತದೆ ಎಂದು ಶ್ರೀಗಳು ವಿಶ್ಲೇಷಿಸಿದರು.

ಯುವ ಪೀಳಿಗೆಯಲ್ಲಿನ ಈ ಚೈತನ್ಯವನ್ನು ಮತ್ತಷ್ಟು ಬೆಳೆಸುವ ಸಲುವಾಗಿಯೇ ಈ ಬಾರಿ ಗ್ರಾಮೀಣ ಕ್ರೀಡಾಕೂಟವನ್ನು ಆಯೋಜಿಸಲಾಗಿತ್ತು. ಕ್ರೀಡೆಯಿಂದ ಚೈತನ್ಯ ಹಾಗೂ ಸಂಘಟನೆ ಉತ್ತಮವಾಗುತ್ತದೆ. ದುಶ್ಚಟಗಳಿಂದ ಹೊರ ಬರಲು ಸಾಧ್ಯವಾಗುತ್ತದೆ. ಹೀಗಾಗಿ ಇತ್ತೀಚಿನ ದಿನಗಳಲ್ಲಿ ಮರೆಯಾಗುತ್ತಿರುವ ಗ್ರಾಮೀಣ ಕ್ರೀಡೆಗಳಿಗೆ ಮರುಜೀವ ನೀಡಬೇಕಿದೆ ಎಂದು ಶ್ರೀಗಳು ಹೇಳಿದರು.

ಈ ಬಾರಿ ಬರ ಇರುವ ಕಾರಣ ಸಿರಿಗೆರೆಯಲ್ಲಿ ಸರಳವಾಗಿ ತರಳಬಾಳು ಹುಣ್ಣಿಮೆ ಆಚರಿಸಲು ನಿರ್ಧರಿಸಲಾಗಿತ್ತು. ಆದರೂ, ರೈತರು ನಮ್ಮ ಸಮಿತಿಯ ನಿರೀಕ್ಷೆಗೂ ಮೀರಿ ದೇಣಿಗೆ ನೀಡಿದ್ದಾರೆ. ನಮ್ಮ ಬಳಿ ಹೆಚ್ಚಿನ ಹಣ ಇದ್ದಾಗ ಕೊಟ್ಟರೆ ಅದು ದಾನವಾಗುತ್ತದೆ. ಆದರೆ, ಬರದ ಈ ಪರಿಸ್ಥಿತಿಯಲ್ಲಿ ರೈತರು ಕೊಟ್ಟಿರುವುದು ದಾನವಲ್ಲ, ಅದು ತ್ಯಾಗ ಎಂದು ಶ್ರೀಗಳು ಬಣ್ಣಿಸಿದರು.



**ನಗರ ದೇವತೆ ದುರ್ಗಾಂಬಿಕಾ ದೇವಿ ಜಾತ್ರೆ : ನಗರದ ವಿವಿಧೆಡೆಗೆ ಡಬ್ಬಿ ಗಡಿಗೆ**

ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆ ಬರುವ ಮಾರ್ಚ್ 19 ಮತ್ತು 20ರಂದು ನಡೆಯಲಿದ್ದು, ಭರದ ಸಿದ್ಧತೆಗಳು ನಡೆದಿವೆ. ಸಂಪ್ರದಾಯದಂತೆ ದೇವಸ್ಥಾನದಿಂದ ಡಬ್ಬಿ ಗಡಿಗೆ ಕಾರ್ಯವೂ ನಡೆಯುತ್ತಿದೆ.

## ಹುಲಿ ಬೇಟೆ ಆಡಿದ್ದೆ ಎಂದ ಶಾಸಕ

ಮುಂಬೈ, ಫೆ. 22 – ನಾಲ್ಕು ದಶಕಗಳ ಹಿಂದೆ ಹುಲಿಯನ್ನು ಬೇಟೆಯಾಡಿದ್ದೆ ಹಾಗೂ ಅದರ ಹಲ್ಲುಗಳನ್ನು ಸರವಾಗಿ ಧರಿಸಿದ್ದೇನೆ ಎಂದು ಮಹಾರಾಷ್ಟ್ರದ ಶಿವ ಸೇನೆ ಶಾಸಕರೊಬ್ಬರು ಹೇಳಿದ್ದಾರೆ. ಮುಖ್ಯಮಂತ್ರಿ ಏಕನಾಥ ಶಿಂಧೆ ನೇತೃತ್ವದ ಶಿವಸೇನೆಗೆ ಸೇರಿದ ಸಂಜಯ್ ಗಾಯಕ್ವಾಡ್ ನೀಡಿರುವ ಹೇಳಿಕೆ ಜಾಲತಾಣಗಳಲ್ಲಿ ವೈರಲ್ ಆಗಿದೆ. 1987ಕ್ಕೆ ಸಾಕಷ್ಟು ವರ್ಷಗಳ ಮೊದಲೇ ಹುಲಿ ಬೇಟೆಯನ್ನು ನಿಷೇಧಿಸಲಾಗಿತ್ತು. ಹೀಗಾಗಿ ಅವರ ಹೇಳಿಕೆ ವಿವಾದಕ್ಕೆ ಕಾರಣವಾಗಿದೆ.

## ಮೈಲಾರಕ್ಕೆ ವಿಶೇಷ ಬಸ್ ಸೌಲಭ್ಯ

ದಾವಣಗೆರೆ, ಫೆ. 22 - ಮೈಲಾರ ಕಾರಣಿಕೋತ್ಸವವು ಇದೇ ದಿನಾಂಕ 25 ರಿಂದ 27 ರವರೆಗೆ ಜರುಗಲಿದೆ. ಭಕ್ತಾದಿಗಳ ಅನುಕೂಲಕ್ಕಾಗಿ ರಾಜ್ಯ ರಸ್ತೆ ಸಾರಿಗೆ ನಿಗಮವು ದಾವಣಗೆರೆ ವಿಭಾಗದ ಘಟಕಗಳಿಂದ 115 ಹೆಚ್ಚುವರಿ ವಿಶೇಷ ವಾಹನಗಳ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

ಜಾತ್ರೆ ಪ್ರಯುಕ್ತ
ತೂಕದ ಲೆಕ್ಕದ ಬಟ್ಟೆ ಅಂಗಡಿ
ಈಗ ಬಟ್ಟೆಗಳು ಒಂದು ಕಿಲೋಗೆ ಕೇವಲ
~~900~~/-, 500/ರೂ.
ಡಿಸ್ಕೌಂಟ್

# ನಗರದ ಮೈಲಾರ ಲಿಂಗೇಶ್ವರ ದೇವಸ್ಥಾನದಲ್ಲಿ ಇಂದಿನಿಂದ ಭಾರತ ಹುಣ್ಣಿಮೆ ಕಾರ್ಯಕ್ರಮ



ದಾವಣಗೆರೆ, ಫೆ. 22- ನಗರದ ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀ ಕ್ಷೇತ್ರ ಮೈಲಾರ ಲಿಂಗೇಶ್ವರ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 24 ರಿಂದ 28 ರವರೆಗೆ ಭಾರತ ಹುಣ್ಣಿಮೆ ಕಾರ್ಯಕ್ರಮ ಹಾಗೂ ಮೈಲಾರಕ್ಕೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಮಾಲತೇಶ ರಾವ್ ಜಾಧವ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕಳೆದ 11 ವರ್ಷಗಳಿಂದ ದಾವಣಗೆರೆಯಿಂದ ಮೈಲಾರ ಕ್ಷೇತ್ರಕ್ಕೆ ಕೇವಲ ಇಬ್ಬರಿಂದ ಪ್ರಾರಂಭವಾದ ಪಾದಯಾತ್ರೆಯಲ್ಲಿ ಈ ವರ್ಷ 550 ರಿಂದ 600 ಜನ ಭಕ್ತಾದಿಗಳು ಪಾಲ್ಗೊಳ್ಳುವರು ಎಂದು ಹೇಳಿದರು.

ನಾಡಿದ್ದು ದಿನಾಂಕ 23 ರ ಶುಕ್ರವಾರ ಸಂಜೆ 4 ಕ್ಕೆ ನಗರದ ಮೈಲಾರ ಲಿಂಗೇಶ್ವರ ದೇವಸ್ಥಾನದಲ್ಲಿ ಬೀಳ್ಕೊಡುಗೆ ಸಮಾರಂಭದ ನಂತರ ಪಾದಯಾತ್ರೆ ಪ್ರಾರಂಭಿಸಲಾಗುವುದು. ಜಿಲ್ಲಾ ರಕ್ಷಣಾಧಿಕಾರಿ ಉಮಾ ಪ್ರಶಾಂತ್ ಮತ್ತಿತರೆ ಗಣ್ಯರು ಭಾಗವಹಿಸಲಿದ್ದಾರೆ.

ದಾವಣಗೆರೆಯಿಂದ ಹೊರಡುವ ಪಾದ ಯಾತ್ರಿಗಳು, ಹರಿಹರ, ಕವಲೆತ್ತು ಮೂಲಕ ಮಾರ್ಗದ ದುರುಗಮ್ಮ ದೇವಸ್ಥಾನದಲ್ಲಿ ವಿಶ್ರಾಂತಿ ಪಡೆಯಲಿದ್ದಾರೆ. ನಂತರ ರಾಣೇ ಬೆನ್ನೂರು, ದೇವರಗುಡ್ಡ, ಹೊನ್ನತ್ತಿ ಮೂಲಕ ಮೈಲಾರ ತಲುಪಲಿದ್ದಾರೆ. 80 ಕಿಮೀ ದೂರದ ಪಾದಯಾತ್ರೆಯಲ್ಲಿ ಭಾಗವಹಿಸುವ ಎಲ್ಲರಿಗೂ ಊಟ, ಔಷಧಿ ಸೇರಿದಂತೆ ಎಲ್ಲಾ ರೀತಿಯ ವ್ಯವಸ್ಥೆ ಮಾಡಲಾಗುವುದು. ಮೈಲಾರದ ಜಾತ್ರೆಗೆ ಬರುವಂತಹವರಿಗೆ ದಾವಣಗೆರೆ ಭಕ್ತಾದಿಗಳಿಂದ ಇದೇ ದಿನಾಂಕ 25 ಮತ್ತು 26 ರಂದು ಊಟದ ವ್ಯವಸ್ಥೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಟ್ರಸ್ಟ್‌ನ ಅಧ್ಯಕ್ಷ ಕೆ.ಎಚ್ ಮಲ್ಲೇಶ್ ಕಂಡ್ರಳ್ಳಿ, ಕಾರ್ಯದರ್ಶಿ ವೀರಣ್ಣ, ಖಜಾಂಚಿ ಎಮ್. ಜಯಪ್ಪ, ಗೋಪಾಲ್ ರಾವ್ ಸಾವಂತ್ ಹಾಗೂ ಪಾದಯಾತ್ರೆ ರೂವಾರಿಗಳಾದ ಮಾಲತೇಶ್, ನಿಂಗರಾಜು, ಗುಡ್ಡಪ್ಪ, ಸಿದ್ದಪ್ಪ, ಟೈಟಾನಿಕ್ ಮಾಲತೇಶ್ ಮತ್ತಿತರರಿದ್ದರು.

**ಹೃತ್ಪೂರ್ವಕ ಅಭಿನಂದನೆಗಳು**



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ದಾವಣಗೆರೆ ಜಿಲ್ಲಾ ಶಾಖೆ ವತಿಯಿಂದ ದಿನಾಂಕ 20 ಹಾಗೂ 21. 02.2024ರಂದು ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ **ದಾವಣಗೆರೆ ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆ**ಗಳಲ್ಲಿ ಆರೋಗ್ಯ ಇಲಾಖೆಯ ಇ.ಎಸ್.ಐ. ವಿಭಾಗದ

**ಶಶಿಕಾಂತ್ ಆರ್.ಹೆಚ್ (ನಿಖಿಲ್)**

ಇವರು ಸಾಂಸ್ಕೃತಿಕ ಸ್ಪರ್ಧೆಗಳ ವಿಭಾಗದ ಜಾನಪದ ಗೀತೆ ಸ್ಪರ್ಧೆಯಲ್ಲಿ ಪ್ರಥಮ, ಮಣಿಪುರಿ ವಿಭಾಗದಲ್ಲಿ ಪ್ರಥಮ ಹಾಗೂ ಕಥಕ್ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನವನ್ನು ಪಡೆದು ಆರೋಗ್ಯ ಇಲಾಖೆ ಹಾಗೂ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.
ಇವರಿಗೆ ಹೃತ್ಪೂರ್ವಕ ಅಭಿನಂದದನೆಗಳು.

**ಸ್ನೇಹಿತರುಗಳಾದ : ಸಂದೀಪ್, ರಘು, ಕಲಾ, ಪೂಜಾ, ಪೂರ್ಣಿಮಾ, ವಿಹನ್, ಮನ್ವಿತ್, ಶ್ಲೋಕ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು.**

## ರಾಜ್ಯ ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷರಾಗಿ ಜಿ.ಎಸ್. ಶ್ಯಾಮ್



ದಾವಣಗೆರೆ, ಫೆ. 22 - ಮಾಯಕೊಂಡ ವಿಧಾನಸಭಾ ಕ್ಷೇತ್ರದ ಬಿಜೆಪಿ ಯುವ ಮುಖಂಡ ಜಿ.ಎಸ್.ಶ್ಯಾಮ್ ಅವರನ್ನು ಭಾಜಪ ಯುವ ಮೋರ್ಚಾ ರಾಜ್ಯ ಉಪಾಧ್ಯಕ್ಷರ ನ್ನಾಗಿ ನೇಮಿಸಿ ರಾಜ್ಯ ಘಟಕ ಆದೇಶ ಹೊರಡಿಸಿದೆ.

ರಾಷ್ಟ್ರೀಯ ಯುವ ಮೋರ್ಚಾ ಅಧ್ಯಕ್ಷ ಹಾಗೂ ಸಂಸದ ತೇಜಸ್ವಿ ಸೂರ್ಯ, ಯುವ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಸಂದೀಪ್ ರವಿ ಅವರ ಶಿಫಾರಸ್ಸಿನ ಮೇರೆಗೆ ಶ್ಯಾಮ್ ಅವರನ್ನು ಯುವ ಮೋರ್ಚಾ ರಾಜ್ಯಾಧ್ಯಕ್ಷ ಧೀರಜ್ ಮುನಿರಾಜು ಅವರು ಈ ನೇಮಕ ಮಾಡಿದ್ದಾರೆ.

## ನಗರದ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ವಿಶೇಷ ಪೂಜೆ



ದಾವಣಗೆರೆ, ಫೆ. 22- ನಗರದ ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಭಾರತ ಹುಣ್ಣಿಮೆ (ಗುರು ಪೂರ್ಣಿಮೆ) ಪ್ರಯುಕ್ತ ನಾಡಿದ್ದು ದಿನಾಂಕ 24ರ ಶನಿವಾರ ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಶ್ರೀಮತಿ ನಾಗರತ್ನ, ಶಶಿಧರ್ ಹಾಗೂ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

## ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ ಕಡು ಬಡವರಿಗೆ ಸೈಕಲ್ ವಿತರಣೆ

ದಾವಣಗೆರೆ, ಫೆ. 22- ಸಾರ್ವಜನಿಕರ ಆರೋಗ್ಯ ದೃಷ್ಟಿ, ವಾಯು ಮಾಲಿನ್ಯ ನಿಯಂತ್ರಣ ಮತ್ತು ಬಡವರ ಸಣ್ಣ ಆರ್ಥಿಕತೆ ಉಳಿತಾಯಕ್ಕಾಗಿ ಕಡು ಬಡವರಿಗೆ ಸೈಕಲ್ ಸವಾರಿ ಮಾಡಲು ಪ್ರೋತ್ಸಾಹಿಸಲಾಗುತ್ತಿದೆ. ಕೂಲಿ ಕಾರ್ಮಿಕರು, ಬಡ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಪತ್ರಿಕಾ ವಿತರಕರಿಗೆ ರೂ. 7000 ಬೆಲೆ ಬಾಳುವ ಹರ್ಕ್ಯುಲಸ್ ಸೈಕಲ್ ಅನ್ನು ಕೇವಲ ರೂ.4500 ಕ್ಕೆ ನೀಡಲಾಗುತ್ತಿದೆ ಎಂದು ಕರುಣಾ ಜೀವ ಕಲ್ಯಾಣ ಟ್ರಸ್ಟ್ ತಿಳಿಸಿದೆ.

ಬಡವರು ಇದರ ಸದುಪಯೋಗ ಪಡೆದುಕೊಳ್ಳಬಹುದು. ವಿವರಕ್ಕೆ ಶ್ರೀಮತಿ ಮಂಜುಳಾ ಬಸವಲಿಂಗಪ್ಪ (7483 809312) ಅವರನ್ನು ಸಂಪರ್ಕಿಸಬಹುದಾಗಿದೆ.

## ನಗರದಲ್ಲಿ ಇಂದು ಆರೋಗ್ಯ ತಪಾಸಣೆ

ಎಸ್.ಎಸ್ ಕೇರ್ ಟ್ರಸ್ಟ್ ವತಿಯಿಂದ ಸಂಚಾರಿ ಆರೋಗ್ಯ ವಾಹನದಲ್ಲಿ 30 ವರ್ಷ ಮೇಲ್ಪಟ್ಟ ವರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವು ಎಂ.ಸಿ.ಸಿ ಬಿ ಬ್ಲಾಕ್ ನ ಬಾಪೂಜಿ ಶಾಲೆಯ ಆವರಣದಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3-30 ರವರೆಗೆ ನಡೆಯಲಿದೆ.


ಉಚಿತ ಬಿ.ಪಿ ತಪಾಸಣೆ, ರಕ್ತದ ಸಕ್ಕರೆ ತಪಾಸಣೆ, ಇ.ಸಿ.ಜಿ ಪರೀಕ್ಷೆ, ನೇತ್ರ ತಪಾಸಣೆ, ಹೃದಯ ತಪಾಸಣೆ ಹಾಗು ನುರಿತ ವೈದ್ಯರಿಂದ ಸಂಪೂರ್ಣ ಆರೋಗ್ಯ ತಪಾಸಣೆ ಹಾಗು ಸಮಾಲೋಚನೆ ಮಾಡಲಾಗುವುದು. ಎಮ್.ಸಿ.ಸಿ ಬಿ ಬ್ಲಾಕ್ ಹಾಗು ಸಿದ್ದವೀರಪ್ಪ ಬಡಾವಣೆ ಯ ನಾಗರಿಕರು ಎಸ್.ಎಸ್ ಕೇರ್ ಟ್ರಸ್ಟ್ ನ ಈ ಸೇವೆಯನ್ನು ಬಳಸಿಕೊಳ್ಳಬಹುದು.

## ದೂಡಾ ಆಯುಕ್ತ ಮಹೇಶ್ ಬಾಬು ಅವರ ಹುದ್ದೆ ಉನ್ನತೀಕರಣ



ದಾವಣಗೆರೆ, ಫೆ.22- ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಎನ್. ಮಹೇಶ್ ಬಾಬು ಅವರ ಹುದ್ದೆಯನ್ನು ಕೆಎಎಸ್ (ಸೂಪರ್ ಟೈಮ್ ಸ್ಕೇಲ್) ವೃಂದಕ್ಕೆ ಉನ್ನತೀಕರಿಸಿರುವುದಲ್ಲದೇ, ಉನ್ನತೀಕರಿಸಿದ ಹುದ್ದೆಯಲ್ಲಿಯೇ ಮುಂದುವರೆಸಲಾಗಿದೆ ಎಂದು ಕರ್ನಾಟಕ ಸರ್ಕಾರದ ಅಧೀನ ಕಾರ್ಯ ದರ್ಶಿ (ಸೇವೆಗಳು 2) ಉಮಾದೇವಿ ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 20-02-2024ರ ಮಂಗಳವಾರದಂದು ನಿಧನರಾದ ಜೆಜೆಎಂ ಮೆಡಿಕಲ್ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕರೂ, ನಗರದ ಹೆಸರಾಂತ ಹೃದಯ ತಜ್ಞರೂ ಆದ

**ಡಾ|| ಶಶಿಧರ ಆರ್. ಮರಳೀಹಳ್ಳಿ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಇವರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ, ಇವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಕುಟುಂಬ ವರ್ಗಕ್ಕೆ ನೀಡಲೆಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.

ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗ
**ಸಿಟಿ ಹೈಟೆಕ್ ಇಮೇಜಿಂಗ್ ಸರ್ವೀಸಸ್ (ಪ್ರೈ.)ಲಿ.,**
ಸಿಟಿ ಸೆಂಟ್ರಲ್ ಹಾಸ್ಪಿಟಲ್ ಬೇಸ್‌ಮೆಂಟ್, 17, ಅಕ್ಕಮಹಾದೇವಿ ರಸ್ತೆ, ಪಿಜೆ ಬಡಾವಣೆ, ದಾವಣಗೆರೆ-2.

SPARSH HOSPITAL
THE TOUCH OF LIFE

**ಸ್ಪರ್ಶ್ ಸೂಪರ್ ಸ್ಪೆಷಾಲಿಟಿ ಕ್ಲಿನಿಕ್**

ಸ್ಪರ್ಶ್ ಆಸ್ಪತ್ರೆ – ಬೆಂಗಳೂರು ಇಲ್ಲಿನ ಪಿತ್ತಕೋಶ
ದಾವಣಗೆರೆ ಸ್ಪರ್ಶ್ ಆಸ್ಪತ್ರೆಯಲ್ಲಿ ಸಮಾಲೋಚನೆಗೆ ಲಭ್ಯರಿರುತ್ತಾರೆ.

**ಡಾ|| ನಿಖಿಲ್ ಬೋಂದಾಡೆ**
MBBS, MD - Internal Medicine, DM - Gastroenterology
ಕನ್ಸಲ್ಟೆಂಟ್ ಗ್ಯಾಸ್ಟ್ರೋಎಂಟೆರೊಲೊಜಿಸ್ಟ್



ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ
- ಜಾಂಡೀಸ್ • ಫ್ಯಾಟಿ ಲಿವರ್ • ಒಬೆಸಿಟಿ • ಹೆಪಟೈಟಿಸ್ ಬಿ • ಹೆಪಟೈಟಿಸ್ ಸಿ
- ಆಲ್ಕೋಹಾಲ್ ರಿಲೇಟೆಡ್ ಲಿವರ್ ಡಿಸೀಸ್ • ಅಸಿಟ್ಸ್ • ಬ್ಲಡ್ ವೊಮಿಟಿಂಗ್
- ಲಿವರ್ ಸ್ವೆಲ್ಲಿಂಗ್ • ಫ್ಯಾಮಿಲಿ ಹಿಸ್ಟರಿ ಆ ಲಿವರ್ ಡಿಸೀಸ್

ನೋಂದಣಿಗಾಗಿ ಕರೆಮಾಡಿ: 96869 29090 / 99800 33277

ದಿನಾಂಕ: ಭಾನುವಾರ, 25ನೇ ಫೆಬ್ರವರಿ 2024 | ಸಮಯ: ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ – 577 002

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ(TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ